Election to the Committee on Estimates.

Sri K. HANUMANTHAIYA (Leader of the House).—Sir, I move:

"That this Assembly do proceed to the election of twelve members to the Committee on Estimates in accordance with rule 137 of the Rules of Procedure and Conduct of Business in the Mysore Legislative Assembly."

Mr. SPEAKER.—The question is:

"That this Assembly do proceed to the election of twelve members to the Committee on Estimates in accordance with rule 137 of the Rules of Procedure and Conduct of Business in the Mysore Legislative Assembly."

The motion was adopted.

Mr. SPEAKER.—The Chair desires to inform the House that for the purpose of election of twelve members to the Committee on Estimates, the office of the Secretary will be open to receive notice of candidature up to 3 P.M. on Thursday the 3rd July 1952 and that the election, if necessary, will take place on Tuesday the 8th July 1952, in the Secretary's room between the hours of 3 P.M. and 5 P.M. The election will be conducted as laid down in sub-rule (2) of rule 137 of the Rules of Procedure and Conduct of Business in the Mysore Legislative Assembly in accordance with the principle of proportional representation by means of the single transferable vote.

BUDGET FOR 1952-53

First Stage—General Discussion

Mr. SPEAKER.—Now the General Discussion on the Budget will commence.

Sri V. M. MASCARENHAS (St. John's Hill).—

Sir, one welcome feature of the Budget is that it does not contemplate any fresh taxation. As the Finance Minister has rightly observed, human nature is generally against any form of taxation. His efforts to balance the Budget, in spite of the deficit, without having recourse to fresh taxation, is to be commended. Looking into these Budgets, one cannot help observing that year by year larger sums of money are needed specially on capital account. Routine administration has to go on. Nation-building departments have to be given greater and greater attention. Larger sums of money have to be provided for capital works. With the result that one is tempted to ask, whither and how long? In the midst of these difficulties, the Finance Minister has chosen the right path. No activity has been neglected or forgotten and larger sums of money have been allotted to long range schemes which I hope will give the needed relief. For all these, he deserves our congratulations.

A perusal of his budget speech reveals that the tasks before the Government today are varied and immense requiring large sums of money. Our resources are limited. For raising money in the market either by means of public loan or by shares, the chances are remote indeed. With the result that our dependence on the Centre becomes more and more and unless the Centre comes to our rescue, I am afraid progress connot be appreciable. Under such circumstances, it becomes necessary for us to ask, what schemes or what undertakings should receive higher priority than others. I would say the question of food and housing must have the highest priority. Hunger and famine must at all costs be kept away. This has been done in the past for the last so many years, and I have every confidence that the present Government also will rise up to our expectations and keep this hunger and famine away. Let us hope and pray that the rains which have so far not come may come in the near future and bring cheer and hope to the farmer of the State.

General satisfaction has been felt all over the country over the recent food policy initiated by the Government. Farmers are happy and as a result we should get better crops next year. But it should be remembered, as I have

already said, that anti-social elements must be ruthlessly suppressed. Also, a very vigilant watch on our borders is necessary to prevent smuggling of foodgrains to the other side.

There is another important thing which we have to remember, namely, the attempt to grow more and more food within the country. Self-sufficiency in food must be attained as soon as possible because that is our goal. Large sums of money can no longer be spent in importing foodgrains at prohibitive costs. Subsidies to farmers in the form of seeds and manures, larger sums for irrigation and other purposes and also bringing in more and more land under the plough will certainly help to solve this problem and I am sure the Government will give all these their fullest attention.

After food, I have said housing is important, and in this connection I am constrained to remark that the attention the Government has bestowed on the problem is unfortunately meagre. The housing problem in all important towns and cities is so acute that people are put to considerable inconvenience, specially the poorer and middle classes. The labour housing scheme is there. But even there much of a beginning has not been made. Well, if we really want to see that our middle and poorer classes live happily, something must be done. To either in co-operative house building societies or house building corporation Government must give all possible aid in the form of finance and in securing controlled materials like iron and steel, so that in the next five years at least, let us hope, we may have larger and larger number of houses.

Hon'ble friends will have seen the budget figures in the Memorandum given to them. The one single Department that takes the largest amount of money is education. The State spends almost 25 per cent of her revenues on Education. Of course, we all realise the importance of education to the country. The question naturally will be asked, how long will the State bear this burden. I think in the Finance Minister's speech he has asked for public munificence and sought the help of private agencies. I think the solution to this problem is there. In future let Government encourage more and more private agencies to take up the cause of education, for then alone can more schools and colleges spring up. Otherwise, our dependence on the Government alone certainly cannot bring fruitful results. In Travancore and Cochin where literacy is 95 per cent, this result was possible only because more than 60 per cent of the schools are under private management.

I now come to the next subject Sir, namely Industries. In the speech of the Finance Minister very great importance has been given and almost three pages of his speech are covered by this Department. It is as it should be. Industries, efficient, well-managed and prosperous, as we are all aware, are a great asset to the country. Besides solving unemployment to a limited extent, the industries consume the raw products of the country and produce consumer's goods obviating the need to bring them from abroad or from the neighbouring States. The State of Mysore which has been known for over 30 years to take a leading part in industries and even today holds such a prominent place, must, in my opinion, give greater and greater attention to its industries, whether Government industries, or aided or private. Government must see that all these industries are stabilised and consolidated and contribute their mite to the prosperity of the country.

Well, I feel the Government has realised what part industries in future are going to play in the country. It is seen by their proposal to have a high powered directorate for this purpose. I will only suggest that in choosing men for this high powered directorate, Government will take care that men with real experience in the field and with highest integrity should be selected. Sir, I am a believer in that statement which one great man has made.

"An institution is the lengthened shadow of one man."

(SRI V. M. MASCARENHAS.)

It is perfectly true. Individual great men have achieved great things and if only such people with integrity and ability are placed at the head of our industries, I am sure industries will be on the right path.

Now, before I conclude Sir, I must make some remarks on the new fertiliser scheme that the Government is contemplating. In my opinion this scheme is not worth while for the simple reason that four crores of public money which has been borrowed for this purpose will have to be invested to produce 50,000 tons of fertilisers. After all, from the Sindhri Factory with a production of 3½ lakhs of tons and Alwayee Factory with 1 lakh of tons, I feel we can easily meet our requirements of 7,000 tons per annum. If we produce 50,000 tons as we contemplate, we certainly cannot dump this fertiliser on our poor farmer at such a high price as Rs. 380 per ton. It will then mean that we go about finding a market for our product, in which case the industry, I feel, cannot pay. Moreover it is expected to consume a large amount of electrical power. It would be desirable if this industry did not take any shape at all.

2 P. M.

In conclusion, I wish to say that just three months back the Government which took office has begun well, with good determination and with a set purpose. Within this short period, retrenchment to an extent of Rs. 30 lakhs has been effected. I am sure that better results will accrue from this administration. They need all our encouragement and support. Let us give them with all the grace that we can command, so that Mysore may always prosper.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).— ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳೂ ಮತ್ತು ಹಣಕಾಸಿನ ಸಚಿವರೂ ಆದ ಶ್ರೀ ಕೆ. ಹನುಮಂತಯ್ಯನವರು ತಮ್ಮ ಮೊಟ್ಟಮೊದಲನೆಯ ಆಯವ್ಯಯ ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಮತ್ತು ಇದೇ ಕಾಲದಲ್ಲಿ ಈ ಆಯವ್ಯಯದ ವಿಚಾರದಲ್ಲಿ ಅನೇಕ ಆಲೋಚನೀಯ ವಿಚಾರಗಳನ್ನೂ ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ದೇಶದಲ್ಲಿ ಈಗ ಖರ್ಚು ಜಾಸ್ತಿಯಾಗುತ್ತಿದೆ. ಖರ್ಚಿಗೆ ಸಾಕಾಗುವಷ್ಟು ವರವಾನ ಬರುತ್ತಿಲ್ಲ ಮತ್ತು ಬರುವ ಸೂಚನೆ ಸಹಾ ಇಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಪ್ರಜೆಗಳೆಲ್ಲರೂ ನಾನಾ ರೀತಿಯಲ್ಲಿ ಪ್ರಜಾಭ್ಯುದಯ ಕೆಲಸ ಕಾರ್ಯಗಳನ್ನು ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮ ದೇಶ ಅತ್ಯಂತ ಹಿಂದಿನ ಕಾಲದಿಂದಲೂ ಪ್ರಗತಿದಾಯಕ ಮಾರ್ಗದಲ್ಲಿ ನಡೆಯಬೇಕೆಂಬ ಒಂದು ನೀತಿಯನ್ನು ಅನುಸರಿಸುತ್ತಾ ಬಂದಿದೆ. ದಿವಾನ್ ರಂಗಾಚಾರ್ಲುರವರ ಕಾಲದಿಂದ ಎಂದರೆ 1881ನೇ ಇಸವಿಯಿಂದ ಪ್ರಜಾಪ್ರತಿನಿಧಿಸಭೆ ಸ್ಥಾಪಿತವಾದ ಕಾಲದಿಂದ ಒಂದು ದೂರದೃಷ್ಟಿಯನ್ನಿಟ್ಟುಕೊಂಡು ಹೇಗೆ ಯಾವ ರಾಜನೀತಿಯಿಂದ ಸರ್ಕಾರ ಕೆಲಸಗಳನ್ನು ಮುಂದುವರಿಸಿಕೊಂಡು ಬಂದಿರುತ್ತದೆಂಬುದರ ಬಗ್ಗೆ ನಾನು ಒಂದೆರಡು ವಿಷಯಗಳನ್ನು ಸಭೆಯ ಮುಂದೆ ಇಡಲಿಚ್ಛಿಸುತ್ತೇನೆ.

> "No countrv can prosper unless its agricultural and manufacturing industries were equally fostered. The ordinary routine of the administration of the Government is not the only subject which requires our notice but the development of the various industries on which the prosperity of the country is dependent equally demands our consideration."

ಇವು ರಂಗಾಚಾರ್ಲುರವರು 1881ನೆಯ ಇಸವಿಯಲ್ಲೇ ಆಡಿದ ಮಾತುಗಳು. ಇವುಗಳನ್ನಾಡಿ ಇಲ್ಲಿಗೇ 71 ವರ್ಷಗಳು ಕಳೆದು ಹೋಗಿವೆ. ಈ 71 ವರ್ಷಗಳಿಂದ ಈ ನಮ್ಮ ಸರ್ಕಾರ ನಡೆದುಕೊಂಡು ಬಂದಿರುವುದು ಆ ಬೆಳಕಿನಿಂದ. ಆದರೆ ಆಗ ನಮ್ಮ ಸಂಸ್ಥಾನದ ಜನಸಂಖ್ಯೆ ಎಷ್ಟಿತ್ತು, ಈಗ ಎಷ್ಟಿದೆ ಎಂಬುದನ್ನು ನೋಡಿದರೆ, ಆಗ 40 ಲಕ್ಷವಿದ್ದದ್ದು ಈಗ 1 ಕೋಟಿಗೆ ಹತ್ತಹತ್ತರ ಬಂದಿದೆ. ಆಗ ಒಂದು ಕೋಟಿ ರೂಪಾಯಿಗಳ ವರಮಾನವಿದ್ದುದು ಈಗ ಸರ್ಕಾರದವರು ನಮ್ಮ ಮುಂದೆ ಮಂಡಿಸಿರುವ ಬಡ್ಜೆಟ್ಟಿನ ಪಟ್ಟಿಯ ಪ್ರಕಾರ 20 ಕೋಟಿ ರೂಪಾಯಿಗಳಾಗಿದೆ. ಆದರೆ ಹೀಗೆ ಒಂದು ಕೋಟಿಯಿದ್ದ ವರಮಾನವನ್ನು 20 ಕೋಟಿಗೆ ಹೆಚ್ಚಿಸಿರುವ ಬಗ್ಗೆ ನಾವು ಯಾವ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆಯೋ ಅದು ಇಡೀ ಇಂಡಿಯಾ ದೇಶಕ್ಕೆ ಒಂದು ಮಾದರಿಯಾಗಿದೆ. ಹೊರಗಡೆಯಿಂದ ಬಂದ ಅನೇಕ ರಾಜನೀತಿಜ್ಞರು ನಮ್ಮ ಸರ್ಕಾರದ ಆಯವ್ಯಯವನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಇಂದು ಪ್ರಜಾಪ್ರಭುತ್ವದ ಆಡಳಿತವು ಯಾವ ಯಾವ ದೇಶಗಳಲ್ಲಿ ಜಾರಿಯಲ್ಲಿರುತ್ತದೋ ಅಲ್ಲೆಲ್ಲಾ ಸರ್ಕಾರದ ಖರ್ಚು ವೆಚ್ಚಗಳು ದಿನೇ ದಿನೇ ಹೆಚ್ಚುತ್ತಾ ಬರುತ್ತಿವೆ. ಆದರೆ ಈ ಸಂಬಂಧವಾಗಿ ಅಮೆರಿಕಾದೇಶದ ಒಬ್ಬ ಹಣಕಾಸಿನ ತಜ್ಞರು ಒಂದು ಮುಖ್ಯವಾದ ವಿಷಯವನ್ನು ಈ ಆಯವ್ಯಯದ ಸಂಬಂಧವಾಗಿ ತಿಳಿಸಿದ್ದಾರೆ. ಅದೇನೆಂದರೆ ಸರ್ಕಾರದ ಖರ್ಚುವೆಚ್ಚಗಳು ಹೆಚ್ಚುಹೆಚ್ಚಾಗುತ್ತ ಹೋದಹಾಗೆಲ್ಲಾ, ದೇಶದಲ್ಲಿರುವ ಪ್ರಜೆಗಳ ಮೇಲೆ ಭಾರ ಸಹ ಹೆಚ್ಚುತ್ತಾ ಹೋಗುತ್ತದೆ. ಆದರೆ ಆ ಪ್ರಜೆಗಳಿಗೆ ಆ ಭಾರವನ್ನು ಹೊರುವಂಥ ಶಕ್ತಿ ಬರಬೇಕು. ಅವರಿಂದ ಸರ್ಕಾರದ ಭಂಡಾರ ತುಂಬಬೇಕು ಎಂಬ ತತ್ವ ಪ್ರಜಾಪ್ರಭುತ್ವ ನೀತಿಯಲ್ಲಿ ಅಡಕ

ವಾಗಿದೆ. ಇದಕ್ಕೋಸ್ಕರವಾಗಿ ನಾವು ಜನರಿಗೆ ಏಕಾಏಕಿ ಕಂದಾಯವನ್ನು ಹಾಕದೆ, ಅವರಿಗೆ ಎಷ್ಟು ತೆರಿಗೆ ಹೊರಲು ಶಕ್ತಿಯಿದೆ ಮತ್ತು ಸಂಪಾದನೆ ಏನು ಇದೆ ಎಂಬ ಈ ಎರಡು ವಿಷಯಗಳೂ ಸರಿಹೊಂದುವ ಹಾಗೆ ನೋಡಿಕೊಂಡು ಕಂದಾಯ ಹಾಕತಕ್ಕದ್ದೇ ಬಹಳ ಮುಖ್ಯವಾದದ್ದು. ಹೀಗೆ ಮಾಡಲು ಎರಡು ವಿಷಯಗಳನ್ನು ನಾವು ಮುಖ್ಯವಾಗಿ ವಿಮರ್ಶೆಮಾಡಬೇಕಾಗಿದೆ. ಒಂದು ವ್ಯಕ್ತಿ ದೃಷ್ಟಿಯಿಂದ, ಇನ್ನೊಂದು ಕಂಪೆನಿ ದೃಷ್ಟಿಯಿಂದ.

ವ್ಯಕ್ತಿ ದೃಷ್ಟಿಯಲ್ಲಿ, ಕಂದಾಯ ಕೊಟ್ಟ ಮೇಲೆ, ಆತನಿಗೆ ಮಾರ್ಕೆಟ್ಟಿನಲ್ಲಿ ಸರಕುಗಳನ್ನು ಕೊಳ್ಳತಕ್ಕ ಸಾಮರ್ಥ್ಯ ಅವನಿಗಿರಬೇಕು. ಇದನ್ನೇ ಎಕನಾಮಿಕ್ಸ್ ಓದಿದವರು ಪರ್‌ಚೇಸಿಂಗ್ ಪವರ್ ಎಂದು ಕರೆಯುತ್ತಾರೆ. ನಾವು ಕಂಪೆನಿ ಉದ್ಯಮಗಳ ಮೇಲೆ ಹಣ ಸಂಪಾದನೆಗಾಗಿ ನಾನಾ ತೆರಿಗೆಗಳನ್ನು ಹಾಕಬಹುದು. ಆದರೆ ಅದಕ್ಕೆ ಒಂದು ಮಿತಿ ಇದೆ. ಅದು ಮುಂದೆ ಉತ್ತರೋತ್ತರವಾಗಿ ಸರಾಗವಾಗಿ ನಡೆದುಕೊಂಡುಹೋಗಲು ಅನುಕೂಲವಾಗತಕ್ಕ ರೀತಿಯಲ್ಲಿ ಎಷ್ಟು ಭಾರ ಹಾಕಬಹುದೋ ಅಷ್ಟಕ್ಕೆ ಮೀರಿ ಹಾಕಬಾರದು. ಇದೇ ತತ್ವವನ್ನೇ ನಾವು ಇಲ್ಲಿ ಪ್ರಜೆಗಳ ಮೇಲೆ ಕಂದಾಯ ಹಾಕಲು ಅನುಸರಿಸಿದ್ದೇವೆ. ಈ ವಿಚಾರವನ್ನೇ ಆ ತಜ್ಞರೂ ಕೂಡ ಹೇಳಿದ್ದಾರೆ. ಇಂಥ ಒಂದು ಘನವಾದ ತತ್ವವನ್ನು ನಮ್ಮ ಸರ್ಕಾರ ಅನೂಚಾನವಾಗಿ ಅನುಸರಿಸಿಕೊಂಡು ಬಂದಿದೆ. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಗೆ ಬಂದಮೇಲೆ ಈ ಸರ್ಕಾರ ಬರಿ ಒಂದು ಕಂದಾಯದ ಮೇಲೆ ನಡೆದುಕೊಂಡು ಹೋಗಲು ಸಾಧ್ಯವಿಲ್ಲ, ಅದಕ್ಕಾಗಿ ದೇಶದಲ್ಲಿ ಹೆಚ್ಚುಹೆಚ್ಚು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಬೇಕು, ಎಂದು ಹೇಳಿ ಅನೇಕ ಕಾರ್ಖಾನೆಗಳನ್ನು ಸ್ಥಾಪಿಸಿದರು. ಹಾಗೆ ಅವರು ಆ ದಿವಸ ಸ್ಥಾಪಿಸಿದ ಎಷ್ಟೋ ಕಾರ್ಖಾನೆಗಳು ಪ್ರವರ್ಧಮಾನಕ್ಕೆ ಬಂದು ಈ ದಿವಸ ಅವುಗಳಿಂದ ಸರ್ಕಾರಕ್ಕೆ ವಿಶೇಷ ಹಣ ಬರುತ್ತಿದೆ. ತದನಂತರದಲ್ಲಿ ಬಂದ ದಿವಾನರುಗಳು ಅದೇ ರೀತಿ ರಾಜ್ಯಭಾರವನ್ನು ನಡೆಸಿಕೊಂಡು ಬಂದರು.

ಈಗ ಸ್ವಾತಂತ್ರ್ಯ ಬಂದ ಮೇಲೆ ನಮ್ಮ ಸರ್ಕಾರದ ಜವಾಬ್ದಾರಿ ಮತ್ತೂ ಹೆಚ್ಚಾಯಿತು. ಪ್ರಜೆಗಳು ಸ್ವಾತಂತ್ರ್ಯ ಬಂದುದು ನಮಗೆ ಕಣ್ಣಿಗೆ ಕಾಣಿಸುತ್ತಿಲ್ಲ, ಮನಸ್ಸಿಗೆ ಗೋಚರವಾಗುತ್ತಿಲ್ಲ, ಅನುಭವಕ್ಕೆ ಬರುತ್ತಿಲ್ಲ ಎಂಬುದಾಗಿ ಆಲೋಚಿಸಲು ಅವಕಾಶವಿಲ್ಲದಂತೆ ಪ್ರಜೆಗಳ ಕಣ್ಣಿಗೆ ಕಾಣುವ ಹಾಗೆ ಅಭ್ಯುದಯ ಕಾರ್ಯಗಳನ್ನು ನಡೆಸಬೇಕು. ಒಂದು ರೀತಿಯಲ್ಲಿ ನೋಡಿದರೆ ಕಳೆದ ನಾಲ್ಕೈದು ವರ್ಷಗಳಲ್ಲಿ ಬಹಳ ಮಟ್ಟಿಗೆ ಸರ್ಕಾರದ ಹಣವನ್ನು ಅನೇಕ ಅಭ್ಯುದಯ ಕಾರ್ಯಗಳಿಗೆ ವಿನಿಯೋಗಿಸಿದ್ದೇವೆ. ಆದರೆ ಈ ಮಧ್ಯದಲ್ಲಿ ಒಂದು ವಿಷಯವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕು. ಈ ದಿವಸ ನಾವು ಇಂಡಿಯಾದೊಳಗೆ ಒಂದು ಸಂಸ್ಥಾನವಾಗಿದ್ದೇವೆ ಅಥವಾ ಒಂದು ರಾಷ್ಟ್ರವಾಗಿದ್ದೇವೆ ಎಂದು ಹೇಳಬಹುದು. ಆದ್ದರಿಂದ ಇಂಡಿಯಾದ ಆಗುಹೋಗುಗಳು ನಮ್ಮ ಮೇಲೆಯೂ ನಿಜವಾಗಿ ಪರಿಣಾಮ ಹೊಂದುತ್ತವೆ. ಮತ್ತು ಇಂಡಿಯಾ ಸರ್ಕಾರದ ಖರ್ಚು ಮತ್ತು ನಮ್ಮ ಸರ್ಕಾರದ ಖರ್ಚು ಎರಡೂ ಕೂಡ ಒಂದೇ ರೀತಿಯಾಗಿ ನಮ್ಮ ತಲೆಯ ಮೇಲೇ ಬಿದ್ದಿರುತ್ತವೆ. ಈಗ ಇಂಡಿಯಾ ಸರ್ಕಾರದ ಬಡ್ಜೆಟ್ಟನ್ನು ತೆಗೆದುಕೊಂಡರೆ ಸುಮಾರು 410 ಕೋಟಿ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. ಇಂಡಿಯಾದಲ್ಲಿ 35 ಕೋಟಿ ಪ್ರಜೆ ಇರುವುದಾಗಿ ಭಾವಿಸಿದರೂ ಒಬ್ಬೊಬ್ಬ ಪ್ರಜೆಗೆ ಸರಾಸರಿ ಸುಮಾರು 11 ರೂಪಾಯಿಗಳು ಬೀಳುತ್ತವೆ. ನಮ್ಮ ಮೈಸೂರಿನ 20 ಕೋಟಿ ರೂಪಾಯಿಗಳ ಖರ್ಚನ್ನು ನಮ್ಮ ಪ್ರಜೆಗಳಿಗೆ ಹಂಚಿದರೆ ಒಬ್ಬೊಬ್ಬ ಪ್ರಜೆಗೆ ಸರಾಸರಿ 20 ರೂಪಾಯಿಗಳು ಬರುತ್ತವೆ. ಆದ್ದರಿಂದ ಒಟ್ಟು ಇಂಡಿಯಾ ಸರ್ಕಾರದ ಮತ್ತು ಮೈಸೂರು ಸರ್ಕಾರದ ಖರ್ಚುಗಳೆರಡನ್ನೂ ಸೇರಿಸಿದರೆ ಒಬ್ಬೊಬ್ಬ ಪ್ರಜೆಗೆ 32 ರೂಪಾಯಿಗಳು ವರ್ಷಕ್ಕೆ ಖರ್ಚಾಗುತ್ತವೆ. ಈ ಭಾರ ನಮ್ಮ ಪ್ರಜೆ ಹೊರಬೇಕು. ಅದೇ ಬಹಳ ಮುಂದುವರಿದ ರಾಷ್ಟ್ರವಾದ ಇಂಗ್ಲೆಂಡ್ ಕಡೆ ನೋಡಿದರೆ ಅಲ್ಲಿ ಸುಮಾರು 4,200 ಮಿಲಿಯನ್ ಪೌಂಡುಗಳನ್ನು ಬಡ್ಜೆಟ್ಟಿನಲ್ಲಿ ಖರ್ಚು ಬಾಬಿನಲ್ಲಿ ತೋರಿಸಿದ್ದಾರೆ. ಅಲ್ಲಿ ಪ್ರಜಾ ಸಂಖ್ಯೆಯಿರುವುದು ಸುಮಾರು 44 ಮಿಲಿಯನ್. ಅದನ್ನು ಲೆಕ್ಕಾಚಾರ ಮಾಡಿದರೆ ಸುಮಾರು 100 ಪೌಂಡುಗಳು ಒಬ್ಬೊಬ್ಬ ಪ್ರಜೆಗೆ ಬೀಳುತ್ತದೆ. ಅಂದರೆ 1,333 ರೂಪಾಯಿಗಳು ಒಬ್ಬ ಪ್ರಜೆ ಮೇಲೆ ಭಾರ ಬೀಳುತ್ತದೆ. ಆದ್ದರಿಂದ ನಮ್ಮ ಮೇಲೆ ಬೀಳುವ 32 ರೂಪಾಯಿಗಳು ಎಲ್ಲಿ, ಅಲ್ಲಿ ಒಬ್ಬ ಪ್ರಜೆ ಮೇಲೆ ಬೀಳುವ 1,333 ರೂಪಾಯಿಗಳು ಎಲ್ಲಿ? ಆದಕಾರಣ ನಮ್ಮ ದೇಶವನ್ನು ಬಹಳಮಟ್ಟಿಗೆ ಮುಂದುವರಿಸಬೇಕು ಮತ್ತು ನಮ್ಮ ಪ್ರಜೆಗಳ ವಾರ್ಷಿಕ ವರಮಾನವನ್ನು ಮತ್ತು ನಮ್ಮ ದೇಶದ ಸಂಪತ್ತನ್ನು ಇನ್ನೂ ಬಹಳವಾಗಿ ಹೆಚ್ಚಿಸಬೇಕು. ಈ ದೃಷ್ಟಿಯಿಂದ ನೋಡಿದರೆ ನಮ್ಮ ದೇಶದಲ್ಲಿ ಸರಾಸರಿ ಒಬ್ಬ ಪ್ರಜೆಯ ವರಮಾನ ವರ್ಷಕ್ಕೆ ಎಷ್ಟಿದೆ ಎಂದು ಅರ್ಥಶಾಸ್ತ್ರಜ್ಞರು ಲೆಕ್ಕಮಾಡಿ ಸುಮಾರು 225 ರೂಪಾಯಿಗಳೆಂದು ಹೇಳಿದ್ದಾರೆ. ಇದು ಬಹಳ ಕಡಮೆ. ಇಂಗ್ಲೆಂಡಿನಲ್ಲಿರುವುದಕ್ಕೂ ಇಲ್ಲಿರುವುದಕ್ಕೂ ಹೋಲಿಸಿದರೆ ಇಲ್ಲಿನ ಪ್ರಮಾಣ ಬಹು ಕಡಮೆಯಾಗಿದೆ. ಆದ್ದರಿಂದ ನಮ್ಮ ದೇಶವನ್ನು ಇನ್ನೂ ಬಹಳ ಉತ್ತಮಸ್ಥಿತಿಗೆ ತರುವುದಕ್ಕೆ ಇಂಡಿಯಾ ಸರ್ಕಾರದವರೂ ನಮ್ಮ ಸರ್ಕಾರದವರೂ ಆಲೋಚನೆ ಮಾಡಿ ರಾಷ್ಟ್ರದ ಒಂದು ಆರ್ಥಿಕ ಯೋಜನೆ ಅಂದರೆ ಪಂಚವಾರ್ಷಿಕ ಯೋಜನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಆ ಪಂಚವಾರ್ಷಿಕ ಯೋಜನೆಯನ್ನು ನಾವು ಸರಿಯಾಗಿ ಅಂತಃಕರಣಪೂರ್ವಕವಾಗಿ ಜಾರಿಗೆ ತಂದ ಹೊರತು ನಮ್ಮ ದೇಶ ಅಭಿವೃದ್ಧಿಸ್ಥಿತಿಗೆ ಬರಲು ಅವಕಾಶವಾಗುವುದಿಲ್ಲ. ಇದರಲ್ಲಿ ಒಂದು ಅಂಶವನ್ನು ನಾವು ಗಮನಿಸಬೇಕು. ಮೊದಲು ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿರುವ 1939ರಲ್ಲಿ ಇದ್ದ ಸ್ಥಿತಿಗೂ ಈಗಿರುವ ಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಆಗ ಒಂದು ರೂಪಾಯಿಗೆ ಕೊಳ್ಳುತ್ತಿದ್ದ ಸಾಮಾನಿಗೆ ಈಗ $4\frac{1}{2}$ ರೂಪಾಯಿಗಳು ಬೇಕಾಗುತ್ತದೆ. ಅಂದರೆ ಜೀವನದ ಖರ್ಚು—ಲಿವಿಂಗ್ ಇಂಡೆಕ್ಸ್—ಎಂಬುದು $3\frac{1}{2}$–$4\frac{1}{2}$ ಯಷ್ಟು ಏರಿದೆ. ಆದ್ದರಿಂದ 1955-56ರ ಹೊತ್ತಿಗೆ ಪಂಚವಾರ್ಷಿಕ ಯೋಜನೆಯನ್ನು ನಾವು ಸಮಗ್ರವಾಗಿ ಕಾರ್ಯಗತಮಾಡಿದರೂ ಕೂಡ 1939ನೆಯ ಇಸವಿಯಲ್ಲಿದ್ದ ಸ್ಥಿತಿಗೆ ಬರಲಾರೆವು ಎಂದು ಹೇಳಿದ್ದಾರೆ. ಅದಕ್ಕಾಗಿ ನಾವು ಈ ಸಂದರ್ಭದಲ್ಲಿ ಒಂದು ಗೊತ್ತಾದ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದೇವೆ. ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಮೈಸೂರೂ ಕೂಡ ನಿಜವಾಗಿ ಭಾಗವಹಿಸಿ ಇಂಡಿಯಾ ಸರ್ಕಾರ ಖರ್ಚು ಮಾಡುವ 1,700 ಚಿಲ್ಲರೆ ಕೋಟಿ ರೂಪಾಯಿಗಳಲ್ಲಿ ಮೈಸೂರಿನ 36 ಕೋಟಿಯನ್ನು ನಾವು 5 ವರ್ಷಗಳಿಗೆ ಇಟ್ಟುಕೊಂಡಿದ್ದೇವೆ. ಈ ಎಲ್ಲಾ ಅಂಶಗಳನ್ನೂ ನೋಡಿದರೆ ನಾವು ಕಷ್ಟಪಟ್ಟು ಕೆಲಸಮಾಡಬೇಕು ಮತ್ತು

(ಶ್ರೀ ಪಿ. ಆರ್. ರಾಮಯ್ಯನವರು.)

ನಮ್ಮ ಸರ್ಕಾರಕ್ಕೆ ಸಹ ಸಹಕಾರ ನೀಡಬೇಕು. ಮುಖ್ಯ ಮಂತ್ರಿಗಳ ಭಾಷಣದಲ್ಲಿ ಅನೇಕ ಮಹತ್ವವುಳ್ಳ ಅಂಶಗಳಿವೆ. ನಾನು ಆಗಲೇ ಹೇಳಿದಂತೆ ನಮ್ಮ ಈಗಿನ ವರಮಾನ elastic ಆಗಿಲ್ಲ. ಇಂಡಿಯಾ ಸರ್ಕಾರಕ್ಕೆ ನಾವು ವಹಿಸಿರುವ ರೈಲ್ವೆ, ವರಮಾನ ತೆರಿಗೆ ಮುಂತಾದುವು ವರ್ಷವರ್ಷವೂ ಹೆಚ್ಚು ಫಲವನ್ನು ಕೊಡುವ ಇಲಾಖೆಗಳು. ನಮಗಿರುವುದು ಭೂಕಂದಾಯ ಮತ್ತು ಕೈಗಾರಿಕೆಗಳು—ಈ ಎರಡು ವರಮಾನದ ಬಾಬುಗಳೂ ಮುಖ್ಯವಾದವು. ಅವುಗಳಿಂದ ಬರಬಹುದಾದ ವರಮಾನವನ್ನು ನಾವು ಸ್ವಲ್ಪ ಹೆಚ್ಚಿಸಿಕೊಳ್ಳಬೇಕು ಮತ್ತು ಕೈಗಾರಿಕೆಗಳನ್ನೂ ಹೆಚ್ಚಿಸಿಕೊಳ್ಳಬೇಕು.

ಮುಖ್ಯ ಮಂತ್ರಿಗಳು ನಮ್ಮ ನೀರಾವರಿ ಪ್ರಾಜೆಕ್ಟುಗಳ ವಿಚಾರ ಹೇಳಿದ್ದಾರೆ. ಈಗ ನಮ್ಮ ಇಂಡಿಯಾ ಸರ್ಕಾರದವರು ಇಟ್ಟುಕೊಂಡಿರುವ ಪ್ರಾಜೆಕ್ಟುಗಳು ದೊಡ್ಡದೊಡ್ಡವು. ದಾಮೋದರ ವ್ಯಾಲಿ ಪ್ರಾಜೆಕ್ಟಿಗೆ 75 ಕೋಟಿ ರೂಪಾಯಿಗಳ ಅಂದಾಜಿದೆ; ಹಿರಾಕುಡ್ ಪ್ರಾಜೆಕ್ಟಿಗೆ 63 ಕೋಟಿ ರೂಪಾಯಿಗಳ ಅಂದಾಜು, ತುಂಗಭದ್ರಾ ಪ್ರಾಜೆಕ್ಟಿಗೆ 50 ಕೋಟಿ ರೂಪಾಯಿಗಳ ಅಂದಾಜು ಹೀಗೆ ಭಾರಿ ಅಂದಾಜುಗಳು ಇಂಡಿಯಾ ಸರ್ಕಾರದವೆ. ಆದರೆ ನಮ್ಮ ಮೈಸೂರು ಸಂಸ್ಥಾನದಲ್ಲಿರುವ ಪ್ರಾಜೆಕ್ಟುಗಳನ್ನು ಅವುಗಳಿಗೆ ಹೋಲಿಸಿದರೆ ಬಹಳ ಕಡಮೆ ಖರ್ಚಾಗತಕ್ಕವು. ಭದ್ರಾ ಪ್ರಾಜೆಕ್ಟಿಗೆ 20 ಕೋಟಿ, ನುಗು ಪ್ರಾಜೆಕ್ಟಿಗೆ 2 ಕೋಟಿ (ಸಕ್ಕರೆ ಬೈಲಿನ ಹತ್ತಿರ) ತುಂಗಾ ಪ್ರಾಜೆಕ್ಟಿಗೆ 2 ಕೋಟಿ—ಹೀಗೆ ಅಂದಾಜಾಗಿದೆ. ಆದ್ದರಿಂದ, ನಮ್ಮ ಮುಖ್ಯ ಮಂತ್ರಿಗಳು ತಿಳಿಸಿದ ಹಾಗೆ, ಇಂಡಿಯಾ ಸರ್ಕಾರದವರು ನಮ್ಮ ಮೈಸೂರಿನ ಈ ಪ್ರಾಜೆಕ್ಟುಗಳಿಗೆ ಹೆಚ್ಚು ಗಮನ ಕೊಟ್ಟು ಅವು ಬೇಗ ನಡೆಯುವ ಹಾಗೆ, ಕೆಲಸ ಬೇಗ ಆಗುವ ಹಾಗೆ ಸಹಾಯಮಾಡುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ತಮ್ಮೆಲ್ಲರ ಬೆಂಬಲದೊಡನೆ ಇಂಡಿಯಾ ಸರ್ಕಾರಕ್ಕೆ ನಮ್ಮ ಪ್ರಾರ್ಥನೆಯನ್ನು ಸಲ್ಲಿಸಬೇಕೆಂಬುದಾಗಿ ನಾನು ವಿನಯಪೂರ್ವಕವಾಗಿ ಸೂಚಿಸುತ್ತೇನೆ.

ಇನ್ನು ಮುಖ್ಯವಾಗಿ ಈ ಬಡ್ಜೆಟ್ಟಿನಲ್ಲಿರುವುದು ಎರಡು ಮೂರು ಅಂಶಗಳು—ವಿದ್ಯಾಭ್ಯಾಸ ಮತ್ತು ಮೆಡಿಕಲ್. ಈ ಎರಡರಲ್ಲೂ ಮುಖ್ಯವಾಗಿ ನಮ್ಮ ದೇಶದಲ್ಲಿ ಹಿಂದಿನಿಂದ ಬಂದಿರುವ ಸಂಪ್ರದಾಯವನ್ನು ಅನುಸರಿಸಿ ನಮ್ಮಲ್ಲಿರುವ ದಾನಿಗಳು, ಇಂಡಿಯಾ ದೇಶಕ್ಕೇ ಭೂಷಣಪ್ರಾಯವಾಗಿರುವಂಥವರು ಆಸ್ಪತ್ರೆ ಮತ್ತು ಸ್ಕೂಲುಗಳ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಆ ಅಂಶವನ್ನು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಆ ಮಹನೀಯರುಗಳು ಮತ್ತು ನಮ್ಮಲ್ಲಿರುವ ಶ್ರೀಮಂತರು ಈ ಧರ್ಮಕಾರ್ಯವನ್ನು ಕೈಕೊಂಡು ಆಸ್ಪತ್ರೆ ಮತ್ತು ಸ್ಕೂಲುಗಳನ್ನು ಕಟ್ಟಿಸುವುದು ಮುಂತಾದ ಕಾರ್ಯಗಳಲ್ಲಿ ಭಾಗವಹಿಸಿ ಹೆಚ್ಚು ಸಹಾಯ ಮಾಡಬೇಕು ಎಂಬುದಾಗಿ ತಮ್ಮ ಮೂಲಕ ಮತ್ತು ಈ ಸಭೆಯ ಮೂಲಕ ಮಹನೀಯರನ್ನು ಪ್ರಾರ್ಥಿಸುತ್ತೇನೆ.

ಇನ್ನೊಂದು ಮುಖ್ಯವಾದ ಅಂಶ ಎಂದರೆ, ವಿದ್ಯಾಭ್ಯಾಸದ ವಿಷಯ. ಇದು ನನಗೆ ಬಹಳ ಪ್ರಿಯವಾದದ್ದು. ಈ ವಿಚಾರದಲ್ಲಿ ಮುಖ್ಯವಾಗಿ ಪ್ಲಾನಿಂಗ್ ಸಮಿತಿಯವರು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಾವು ವರ್ಷೇ ವರ್ಷೇ ಹೆಚ್ಚು ಹಣ ಖರ್ಚು ಮಾಡುತ್ತಾ ಇದ್ದೀರಿ. ಅದರಲ್ಲಿ ಸ್ವಲ್ಪ ಸುಧಾರಣೆ ಆಗಬೇಕು. ಇಲ್ಲದಿದ್ದರೆ ಬಹಳ ಹಣ ಪೋಲಾಗುತ್ತದೆ. ಅದನ್ನು ನಾನು ಹೇಳುತ್ತಾ ಇಲ್ಲ; ಈ ವಿಷಯದಲ್ಲಿ ಬಹಳವಾಗಿ ಸಂಶೋಧನೆ ನಡೆಸಿರತಕ್ಕ ಮಹನೀಯರು ಹೇಳುತ್ತಾ ಇದ್ದಾರೆ.

Mr. SPEAKER.—May I prescribe a time limit for speeches ?

Sri K. HANUMANTHAIYA (Leader of the House).—Fifteen minutes for each speaker.

Mr. SPEAKER.—So no speech will exceed fifteen minutes.

Sri P. R. RAMAIYA.—How much time will I be given ?

Mr SPEAKER.—Fifteen minutes.

(Janab Mohamed Imam rose.)

Mr. SPEAKER.—You will be given enough time as the Leader of the Opposition.

Sri P. R. RAMAIYA.—In page 221 of the Planning Commission Report it is said :—

> "Many of the products of the present system of education have an excessively low value in the employment work, and are not even giving efficient service in the departments of Government for which the system was originally designed."

ಈ ಒಂದು ವಾಕ್ಯವೇ ಸಾಕು. ನಮ್ಮ ವಿದ್ಯಾಭ್ಯಾಸ ಪದ್ಧತಿಯಲ್ಲಿ ಎಷ್ಟು ಸುಧಾರಣೆ ಆಗಬೇಕೆಂಬುದನ್ನು ನಾನು ಹೆಚ್ಚಾಗಿ ಒತ್ತಿ ಹೇಳಬೇಕಾಗಿಲ್ಲ.

ಕಡೆಯದಾಗಿ ಒಂದು ವಿಷಯ ಹೇಳಬೇಕಾಗಿದೆ. ಸರ್ಕಾರದವರು ಅದನ್ನು ಗಮನಿಸಬೇಕು. ಈಗ ನಮ್ಮ ಮುಖಂಡರು 'ಕ್ಲಾಸ್‌ಲೆಸ್ ಸೊಸೈಟಿ' ಎಂಬ ಪದವನ್ನು ಉಪಯೋಗಿಸಿ ಭಾಷಣಮಾಡುತ್ತಾರೆ. ನನ್ನ ಮಟ್ಟಿಗೆ ಕೇಳುವುದಾದರೆ ಕ್ಲಾಸ್‌ಲೆಸ್ ಸೊಸೈಟಿ ಎಂಬುದು ಬಹಳ ಉದಾತ್ತವಾದ ಗುರಿಯಾಗಿದ್ದಾಗ್ಯೂ ಕೂಡ ನಮ್ಮ ದೇಶದ ಈಗಿನ ಸ್ಥಿತಿಯಲ್ಲಿ ನಾವು ಅದನ್ನು ಬಹಳ ಬೇಗ ಮುಟ್ಟುವ ಹಾಗಿಲ್ಲ. ನಮ್ಮಲ್ಲಿ 'ಕ್ಲಾಸಸ್' ಇದ್ದೇ ಇವೆ. ಯಾವ ಕ್ಲಾಸ್‌ನಿಂದ ನಾನು ಬಂದಿದ್ದೇನೋ ಎಂದರೆ ಮಿಡ್ಲ್‌ಕ್ಲಾಸ್‌ನ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅನೇಕ ವರ್ಷಗಳ ಹಿಂದೆ ಎಂದರೆ 9 7ರಲ್ಲಿ ಈಗ ರಾಷ್ಟ್ರಪತಿಗಳಾಗಿರತಕ್ಕ ಡಾಕ್ಟರ್ ರಾಜೇಂದ್ರ ಪ್ರಸಾದ್‌ರವರು ಮೈಸೂರು ಟೌನ್‌ಹಾಲ್‌ನಲ್ಲಿ ಒಂದು ಭಾಷಣಮಾಡಿದರು. ಆಗ ಅವರು ಏನು ಹೇಳಿದರು ಎಂದರೆ: ನಮ್ಮ ಮಿಡ್ಲ್‌ಕ್ಲಾಸ್‌ನ ಜನಗಳ ಸ್ಥಿತಿ ಬಹಳ ಶೋಚನೀಯವಾಗಿದೆ; ಒಬ್ಬ ಪ್ರೈಮರಿ ಸ್ಕೂಲಿನ ಮೇಷ್ಟರಾಗಲಿ ಕ್ಲಾರ್ಕ್ ಆಗಲೀ ಸಂಪಾದಿಸತಕ್ಕ ಸಂಬಳ ಒಬ್ಬ ಸ್ಕ್ಯಾವೆಂಜರ್ ಸಂಪಾದಿಸುವುದಕ್ಕಿಂತಲೂ ಬಹಳ ಕಡಮೆಯಾಗಿದೆ ಎಂದು ಹೇಳಿದ್ದಾರೆ. ಈ 25 ವರ್ಷಗಳಲ್ಲಿ ಅವರ ಸ್ಥಿತಿಯಲ್ಲಿ ಬಹಳ ದಲಾವಣೆಯಾಗಿಲ್ಲ. ನಮ್ಮ ಬಡ ಸ್ಕೂಲ ಉಪಾಧ್ಯಾಯರ, ಬಡ ಗುಮಾಸ್ತರ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಆದ್ದರಿಂದ ಆ ಉದಾತ್ತವಾದ ಕ್ಲಾಸ್‌ಲೆಸ್ ಸೊಸೈಟಿ ರಚನೆಮಾಡಬೇಕೆಂಬ ಗುರಿ ಇದ್ದಾಗ್ಯೂ ನಮ್ಮ ಈಗಿನ ಪೀಳಿಗೆಯ ಮಧ್ಯಮವರ್ಗದ

ಜನಗಳ ಯೋಗಕ್ಷೇಮ ನೋಡಿಕೊಳ್ಳಲು ತಕ್ಕ ಗಮನವನ್ನು ಇಂಡಿಯಾ ಸರ್ಕಾರದವರು ಕೊಟ್ಟಿಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ ಯಾವ ದೇಶದಲ್ಲೇ ಆಗಲಿ ಆ ದೇಶದ ಅಭ್ಯುದಯಕ್ಕೆ, ಈ ಸಭಾಭವನಕ್ಕೆ ಕಂಬಗಳು ಹೇಗೆ ಆಧಾರಸ್ತಂಭಗಳಾಗಿವೆಯೋ ಹಾಗೆಯೇ ಸಮಾಜದ ಮಧ್ಯಮ ತರಗತಿಯ ವರು ಆಧಾರಸ್ತಂಭವಾಗಿದ್ದಾರೆ. ಆದ್ದರಿಂದ ಅವರ ಸ್ಥಿತಿಯನ್ನು ಉತ್ತಮಪಡಿಸಲು ನಮ್ಮ ಸರ್ಕಾರ ತಕ್ಕ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳಬೇಕು. ಅಲ್ಲದೆ ಸರ್ಕಾರದ ಅಧೀನದಲ್ಲಿರತಕ್ಕ ಮಧ್ಯಮ ತರಗತಿಯವರ ಜೀವನಸ್ಥಿತಿಯನ್ನು ಉತ್ತಮಪಡಿಸಲು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ಮತ್ತೊಮ್ಮೆ ನಮ್ಮ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇಟ್ಟಿರತಕ್ಕ ಈ ಆಯವ್ಯಯದ ಅಂದಾಜನ್ನು ಸ್ವಾಗತಿಸುತ್ತೇನೆ ಮತ್ತು ಇದಕ್ಕೆ ಸಭೆಯ ಒಪ್ಪಿಗೆ ದೊರೆಯುತ್ತದೆ ಎಂದು ಆಶಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri Sydney A. THOMAS (Nominated).—Mr. Speaker, I have gone through the Budget with some care and at the outset I must characterise it as one which is dull and listless Even though I characterise it as dull and listless, I do not wish to convey to you the impression that it is not acceptable. Indeed it is a most welcome Budget inasmuch as it seeks to provide in a greater measure than in the past for such nation building activities in the medical line, public health, industrial and rural development without placing any additional burden on the tax-payer.

The Budget anticipates a net deficit of 101·72 lakhs. I am afraid, and I hope my fears are belied, that this position will be aggravated by the loss due to seasonal conditons, loss on income due to the recent power cuts, the expenditure on the amelioration of those in distress areas and considerable loss on royalties and profits on the sale of gold. I hope that I will be a false prophet. With these general observations I should like to bring home to the Government one or two points which strike me very forcibly and which I think can be remedied.

I wish to make a very earnest plea on behalf of our nursing service. I put myself to some pains and trouble to ascertain the conditions of work and the conditions of living of our nurses. Though I find that the conditions are fairly satisfactory, there is much need and there is great scope for improvement. The scales of pay of our nurses are comparatively low. A nurse works for eight hours a day and by night twelve hours. For four months she works for twelve hours by night. A nurse is in receipt of Rs. 19 as stipend during training and at the end of three years she is in receipt of a stipend of Rs. 32. After qualifying as a midwife, she becomes a qualified nurse of second grade on Rs. 45, less than the pay of an unskilled labourer in the State.

I also discovered certain anomalies in the ration allowance of some of the nurses. While the stipend nurse and the pupil nurse get a ration allowance of Rs. 1-12-0 per day, instead of increasing it according to the grade of the nurse, I find that there is a decrease. The second grade nurse gets Rs. 24 a month and the nursing sister after ten years' service gets Rs. 34 a month. I ask: how can the nurses live ? These conditions have continued for some time and I think it is time that Government did something about it. These nurses are too engrossed in their work, too tired giving off their best, a work of love ; and I feel that they have no time to collectively bargain with those in authority. Are we to take the advantage of them and expect much from them ?

2-30 P.M.

I hope the Government will give this matter its earnest attention.

I now return to the question of maternity hospitals in the State. I have visited some of the maternity hospitals in big cities like Bangalore and Mysore. They are kept in good condition, in very good condition I should say. But it is in the Districts that they are in a deplorable condition. The conditions there are most insanitary. The bed-sheets which are supposed to be white, defy description ; they are more brown. This is not a matter which requires more money, but those in charge of the institutions can see that they are properly cleaned. The smell, the odour which permeate these hospitals is something which I cannot

(SRI SYDNEY A. THOMAS.)

describe. I am not surprised if people from Kolar Gold Fields come as far as Bangalore for their confinement cases, often with considerable expenditure, often borrowing money. Another matter is the question of medicine in these hospitals. Cases of complication require injections and other patent medicines. The hospital authorities will ask the patients to purchase these injections. If they have not the means to do so, the patients are left to Providence. Where such medicines are required, I suggest, at least half the cost should be borne by Government.

Another matter which I feel I should bring to the notice of the Government and which has been trotted out several times previously, is the question of the pay of the Police Constable. You start him on Rs. 22, very much lower than what you start a nurse on. You expect him to be incorrupt and loyal. How can you expect him to be incorrupt on Rs. 22? In Kolar Gold Fields the labourer there earns about Rs. 25. The poor Constable earns Rs. 22 and yet you expect him to maintain law and order. This he certainly does giving off his best in time of emergency. So far as corruptibility is concerned, it is increasing in Kolar Gold Fields. I do not say that all police men are corrupt. Some of our Sub-Inspectors and Inspectors in Kolar Gold Fields are men of honesty and integrity and I have greatest admiration for them. I know two or three of them are beyond the pales of corruption. I find under the 'Miscellaneous' one lakh is to be contributed to National Defence Academy. I think defence is a Central subject and why Mysore should contribute a lakh is beyond my comprehension. This one lakh may be spent more usefully to the amelioration of the lot of the police men and specially those in lower cadre.

I should like to conclude by taking this opportunity to express to His Highness and His Highness's Government the thanks of the Anglo-Indian community for having nominated one of its number to represent it in this House. We are more than assured by this very significant gesture. When such a small minority, this microscopic minority community is assured and given representation, I feel that larger minority interests have little to fear. I conclude Sir.

* ಶ್ರೀ ಕೆ. ಲಕ್ಕಪ್ಪನವರು (ಚನ್ನರಾಯಪಟ್ಟಣ).— ಅಧ್ಯಕ್ಷರೇ, ನಮ್ಮ ಸರ್ಕಾರದವರು ಇಂದು ನಮ್ಮ ಮುಂದೆ 101·72 ಲಕ್ಷ ರೂಪಾಯಿಗಳ ಖೋತ ಆಯವ್ಯಯಪಟ್ಟಿಯನ್ನಿಟ್ಟಿದ್ದಾರೆ. ಹೀಗೆ ಖೋತಾ ಬಡ್ಜೆಟ್ ಅಂದ ಮಾತ್ರಕ್ಕೇ ಈ ಬಡ್ಜೆಟ್ಟು ಅಷ್ಟು ತೃಪ್ತಿಕರವಾಗಿಲ್ಲವೆಂದಾಗಲಿ, ಪ್ರಗತಿದಾಯಕವಾಗಿಲ್ಲವೆಂದಾಗಲಿ ನಾನು ಹೇಳುವುದಿಲ್ಲ. ಇಂದಿನ ಬಡ್ಜೆಟ್ಟನ್ನು ಸ್ವಲ್ಪ ಒಳಹೊಕ್ಕು, ಸರ್ಕಾರದವರು ಈ ಬಡ್ಜೆಟ್ಟನ್ನು ಸಭೆಯ ಮುಂದೆ ಮಂಡಿಸುವಾಗ ಯಾವ ನೀತಿಯನ್ನು ಯಾವ ಧೋರಣೆಯನ್ನು ಅನುಸರಿಸಿದ್ದಾರೆಂಬುದನ್ನು ನೋಡಬೇಕು. ಯಾವತ್ತೂ ದೇಶದಲ್ಲಿ ಬಹಳಕಷ್ಟದಿಂದ ದುಡಿದು ಆಹಾರವನ್ನು ಬೆಳೆದು ಇಡೀ ದೇಶಕ್ಕೇ ಅನ್ನ ಕೊಟ್ಟು ಅನ್ನದಾತರೆಂದೆನಿಸಿಕೊಂಡಿರತಕ್ಕ ಕೃಷಿಕರಿಗೂ ವ್ಯವಸಾಯಗಾರರಿಗೂ ಅನುಕೂಲವಾಗುವಂತೆ ಯಾವ ನೀತಿ, ಧೋರಣೆಗಳನ್ನನುಸರಿಸಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದನಂತರ, ಈ ಬಡ್ಜೆಟ್ಟಿನ ವಿಷಯದಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿದೆ. ನಮ್ಮೆಲ್ಲರಿಗೂ ಗೊತ್ತಿರುವಹಾಗೆ ಕಳೆದ ಇಂಟೆರಿಮ್ ಬಡ್ಜೆಟ್ಟನ್ನು ಕೊಟ್ಟಂಥ ಕಾಲದಲ್ಲಿ ದೇಶದ ಆರ್ಥಿಕಸ್ಥಿತಿ ಮತ್ತು ಸರ್ಕಾರದ ಆಯವ್ಯಯದ ಸ್ಥಿತಿ ಯಾವರೀತಿ ಇತ್ತೆಂಬುದನ್ನು ನಾವೀಗ ಸ್ವಲ್ಪ ನೆನೆದುಕೊಳ್ಳಬೇಕು. ಕೇಂದ್ರ ಸರ್ಕಾರದವರು ಆಹಾರದ ಸಬ್ಸಿಡಿಯನ್ನು ನಿಲ್ಲಿಸಿದುದರಿಂದ ಸುಮಾರು 3 ಕೋಟಿಗೆ ಜಾಸ್ತಿಯಾಗಿ ಹಣ ಖೋತಾ ಬೀಳಬಹುದಾದಂಥ ಮತ್ತು ರೆವಿನ್ಯೂ ಡಿಫಿಸಿಟ್ ಸುಮಾರು 84 ಲಕ್ಷರೂಪಾಯಿಗಳಷ್ಟು ಬರಬಹುದಾದಂಥ ಸನ್ನಿವೇಶವಿತ್ತು. ಹೀಗೆ ಒಟ್ಟಿನಲ್ಲಿ 4 ಕೋಟಿ ರೂಪಾಯಿಗಳಷ್ಟು ಖೋತಾ ಬೀಳುವ ಸನ್ನಿವೇಶವನ್ನು ಈಗಿನ ಮಂತ್ರಿ ಮಂಡಳವು ಅಧಿಕಾರಕ್ಕೆ ಬಂದಮೇಲೆ ಕೇವಲ 101 ಲಕ್ಷ ರೂಪಾಯಿಗಳು ಖೋತಾ ಬೀಳುವಂತೆ ಮಾಡಿರುವುದನ್ನು ನೋಡಿದರೆ ಅವರು ಬಹಳ ವಿವೇಚನೆಯಿಂದಲೂ ದಿಟ್ಟತನದಿಂದಲೂ ಈ ಬಡ್ಜೆಟ್ಟನ್ನು ತಯಾರುಮಾಡಿದ್ದಾರೆಂಬುದು ಚೆನ್ನಾಗಿ ವ್ಯಕ್ತಪಡುತ್ತದೆ. ಜೊತೆಗೆ, ಒಂದೆಡೆ 1951-52 ರಲ್ಲಿದ್ದುದಕ್ಕೂ 1952-53 ರಲ್ಲಿರುವುದಕ್ಕೂ ಹೋಲಿಕೆ ಮಾಡಿದರೆ, ಕೆಲವು ಇಲಾಖೆಗಳಲ್ಲಿ ಆದಾಯ ಕಡಮೆಯಾಗುವ ಸನ್ನಿವೇಶಗಳಿದ್ದು ಮತ್ತೊಂದೆಡೆ ವಿಧಿವತ್ತಾಗಿ ಹೆಚ್ಚಿಗೆ ಹಣವನ್ನು ಮಂಜೂರು ಮಾಡಬೇಕಾದ ಸನ್ನಿವೇಶದಲ್ಲಿ ಈ ಬಡ್ಜೆಟ್ಟು ತಯಾರಾಗಿದೆ. ಇದನ್ನು ನಾವು ಈ ಬಡ್ಜೆಟ್ ಮೆಮೊರಾಂಡಮ್ಮಿನ 5-6 ನೆಯ ಪುಟಗಳಲ್ಲಿ ನೋಡಿದರೆ ಗೊತ್ತಾಗುತ್ತದೆ. ಲ್ಯಾಂಡ್ ರೆವಿನ್ಯೂ ಬಾಬಿನಲ್ಲಿ 51-52 ನೆಯ ಸಾಲಿಗಿಂತಲೂ 52-53 ರಲ್ಲಿ 5·32 ಲಕ್ಷ ರೂಪಾಯಿಗಳು ಕಡಮೆ ಬೀಳುತ್ತದೆಂದು ಗೊತ್ತಾಗುತ್ತದೆ. ಅದೇ ರೀತಿಯಾಗಿ ಫಾರೆಸ್ಟು ಮತ್ತು ಸ್ಟೇಟ್ ಎಕ್ಸೈಸ್ ಬಾಬುಗಳಲ್ಲಿ ಹೆಚ್ಚಿಗೆ ಖೋತಾ ಬೀಳತಕ್ಕ ಸನ್ನಿವೇಶವಿದೆ. ಖರ್ಚಿನ ಭಾಗವನ್ನೂ

*Speeches asterisked indicate that they have not been revised by the Member concerned.

ನೋಡುವುದಾದರೆ ಸಾಲಗಳ ಮೇಲಿನಬಡ್ಡಿ, ಪೋಲೀಸ್, ವಿದ್ಯಾಭ್ಯಾಸ, ಮೆಡಿಕಲ್ ಮತ್ತು ಪಬ್ಲಿಕ್‌ಹೆಲ್ತ್, ವ್ಯವಸಾಯ, ಸಿವಿಲ್ ವರ್ಕ್ಸ್—ಇವೇ ಮೊದಲಾದ ಬಾಬುಗಳಿಗೆ ಕಳೆದ ಸಾಲಿಗಿಂತಲೂ ಈ ವರ್ಷ ಅಗತ್ಯವಾಗಿ ಹೆಚ್ಚು ಹಣವನ್ನು ಒದಗಿಸಬೇಕಾದ ಪರಿಸ್ಥಿತಿ ಇದೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಬಹಳ ವಿವೇಚನೆಯಿಂದ ಈ ಬಡ್ಜೆಟ್ಟನ್ನು ಸರಿಪಡಿಸಿರುವುದು ನಿಜವಾಗಿಯೂ ಶ್ಲಾಘನೀಯವಾದ ವಿಚಾರ. ಅದರಲ್ಲೂ ಯಾವ ಹೊಸ ತೆರಿಗೆಯನ್ನೂ ಹಾಕುವ ಗೋಜಿಗೆ ಹೋಗದೆ, ಇರತಕ್ಕ ಆದಾಯದಲ್ಲೇ ಎಲ್ಲವನ್ನೂ ಸರಿಪಡಿಸಿಕೊಂಡು, ಈ ಬಡ್ಜೆಟ್ಟನ್ನು ಮುಂದಿಟ್ಟಿರುವುದಕ್ಕೆ ಅವರನ್ನು ಅಭಿನಂದಿಸಬೇಕು. ಆದ್ದರಿಂದ ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡುವುದರಲ್ಲಿ ನಮ್ಮ ಅಳತೆಯ ಕೋಲಾದರೂ ಏನಿರಬೇಕು? ನಮ್ಮ ಸರ್ಕಾರ ರಾಷ್ಟ್ರೀಯ ಪುನರುದ್ಧಾರ ಕಾರ್ಯಗಳಿಗೆ ಎಷ್ಟು ಹಣವನ್ನು ಒದಗಿಸಿದೆ ಮತ್ತು ಹಳ್ಳಿಗಾಡಿನಲ್ಲಿರತಕ್ಕ ರೈತರ ಮತ್ತು ಕಾರ್ಮಿಕರ ಹಿತಸಾಧನೆಗಾಗಿ ಎಷ್ಟು ಹಣವನ್ನು ಮುಡಿಪಾಗಿಟ್ಟಿದೆ—ಎಂಬುದನ್ನು ನಾವು ದೃಷ್ಟಿಯಲ್ಲಿಟ್ಟು ಅಳತೆಮಾಡುವುದರ ಮೂಲಕ ಈ ಬಡ್ಜೆಟ್ಟಿನ ಪ್ರಗತಿಶೀಲ ನೀತಿಯನ್ನು ನೋಡಬಹುದಾಗಿದೆ.

ಈ ದೃಷ್ಟಿಯಿಂದ ನಾವು ನೋಡುವುದಾದರೆ, ನೇಷನ್ ಬಿಲ್ಡಿಂಗ್ ಕೆಲಸಗಳಿಗೆ ನಮ್ಮ ಸರ್ಕಾರ ಬಹಳ ಹಣವನ್ನೊದಗಿಸಿದೆ. ಇದರಲ್ಲಿ ಬಹು ಮುಖ್ಯವಾಗಿ ವಿದ್ಯಾಭ್ಯಾಸದ ಇಲಾಖೆಗೆ ಹೆಚ್ಚು ಹಣವನ್ನೊದಗಿಸಿರುವುದು ನಿಜವಾಗಿಯೂ ಶ್ಲಾಘನೀಯವಾದ ವಿಚಾರ. ಈ ವರ್ಷ ವಿದ್ಯಾಭ್ಯಾಸಕ್ಕೆ ಸುಮಾರು 355·74 ಲಕ್ಷ ರೂಪಾಯಿ ಒದಗಿಸಿದ್ದಾರೆ. ಕಳೆದ ಸಾಲಿಗಿಂತಲೂ ಈ ಸಾರಿ ಹೆಚ್ಚು ಹಣವನ್ನೊದಗಿಸಿದ್ದಾರೆ. ಸಂಸ್ಥಾನದ ಒಟ್ಟು ಆದಾಯದಲ್ಲಿ ನಾಲ್ಕನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಹಣವನ್ನು ಸರ್ಕಾರದವರು ವಿದ್ಯಾಭ್ಯಾಸಕ್ಕೆ ಒದಗಿಸಿರುವುದು ಎದ್ದು ಕಾಣುತ್ತದೆ. ಹೀಗೆ ಹೆಚ್ಚು ಹಣವನ್ನೊದಗಿಸಿದುದರ ಪರಿಣಾಮವಾಗಿ 1946–47 ನೆಯ ಸಾಲಿನಲ್ಲಿದ್ದ ಕೇವಲ 10,449 ರಿಂದ ಈಗ 15,379 ರಷ್ಟು ವಿದ್ಯಾಸಂಸ್ಥೆಗಳ ಸಂಖ್ಯೆ ಜಾಸ್ತಿಯಾಗಿದೆ. 1946–47 ರಲ್ಲಿ ವಿದ್ಯಾರ್ಥಿಗಳ ಸಂಖ್ಯೆ 6,28,452 ಇದ್ದುದು ಇಂದು 9,31,474 ಕ್ಕೆ ಏರಿದೆ. ಹೀಗೆ ವಿದ್ಯಾಪ್ರಗತಿಗಾಗಿ ಸರ್ಕಾರದವರು ಬಹಳ ಹಣವನ್ನು ಖರ್ಚು ಮಾಡುತ್ತಿರುವುದು ಬಹಳ ಶ್ಲಾಘನೀಯವಾದ ವಿಚಾರವಾಗಿದೆ.

ಎರಡನೆಯ ಬಹುಮುಖ್ಯ ರಾಷ್ಟ್ರೀಯ ಕಾರ್ಯವೆಂದರೆ, ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು. ಈ ಕ್ಷೇತ್ರದಲ್ಲಿಯೂ ಸಹ ನಮ್ಮ ಸರ್ಕಾರದವರು ಹೆಚ್ಚು ಹಣವನ್ನೊದಗಿಸಿದ್ದಾರೆ. ನಮ್ಮ ಬೆಂಗಳೂರು ಪಟ್ಟಣದಲ್ಲಿರತಕ್ಕ ಪಿಂಗಾಣಿ ಕಾರ್ಖಾನೆಯಿಂದ ಹೆಚ್ಚು ಆದಾಯ ಪಡೆಯಬೇಕೆಂಬ ದೃಷ್ಟಿಯಿಂದ ಈ ಸಾರಿ ಹತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನೊದಗಿಸಿದ್ದಾರೆ. ಭದ್ರಾವತಿಯಲ್ಲಿರತಕ್ಕ ಸಿಮೆಂಟ್ ಮತ್ತು ಉಕ್ಕಿನ ಕಾರ್ಖಾನೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಬೇಕಾದಷ್ಟು ಹಣವನ್ನೊದಗಿಸಿದ್ದಾರೆ. ಹಿಂದೆ ಭದ್ರಾವತಿ ಕಾರ್ಖಾನೆಯನ್ನು ಮೈಸೂರಿನ ಬಿಳಿ ಆನೆ ಎಂದು ಹೇಳುತ್ತಿದ್ದೆವು. ಆ ಕಾರ್ಖಾನೆ ಈ ಹೊತ್ತು ನಮ್ಮ ಭಾಗಕ್ಕೆ ಕಲ್ಪವೃಕ್ಷವಾಗಿದೆ; ಬಹಳ ಲಾಭವನ್ನು ನಮಗೆ ಕೊಡುತ್ತಿದೆ. ವರ್ಷವರ್ಷವೂ ಎರಡೂವರೆ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೆಲೆಬಾಳುವ ಸಾಮಾನುಗಳನ್ನು ಆ ಕಾರ್ಖಾನೆ ತಯಾರು ಮಾಡುತ್ತಿದೆ. ಹೀಗೆ ನಮ್ಮ ಕೈಗಾರಿಕೆ ಕ್ಷೇತ್ರದಲ್ಲಿಯೂ ನಾವು ಮುಂದುವರಿಯುತ್ತಿದ್ದೇವೆ. ಈ ಸಮಯದಲ್ಲಿ, ನಮ್ಮ ಕೈಗಾರಿಕೆಗಳು ಇನ್ನೂ ಮುಂದುವರಿದು ಹೆಚ್ಚು ಲಾಭದಾಯಕವಾದ ರೀತಿಯಲ್ಲಿ ಅವುಗಳನ್ನು ನಡೆಸಿಕೊಂಡು ಹೋಗಬೇಕೆಂಬ ಉದ್ದೇಶವಿದ್ದಲ್ಲಿ, ನಾವು ಮೊದಲು ಅಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಹೋಗಲಾಡಿಸಬೇಕು. ಹೀಗೆ ಮಾಡಿ ಉತ್ತಮವಾದ ರೀತಿಯಲ್ಲಿ ಹೆಚ್ಚು ಲಾಭದಾಯಕವಾಗಿ ಕೆಲಸ ನಡೆಸಿಕೊಂಡು ಹೋಗುವಂತೆ ಮಾಡುವ ಜವಾಬ್ದಾರಿ ನಮ್ಮ ಸರ್ಕಾರದ ಮೇಲಿದೆ. ಇದು ಚೆನ್ನಾಗಿ ಮನವರಿಕೆಯಾಗಿ ಇದಕ್ಕಾಗಿ ಹೈಪವರ್ ಡೈರೆಕ್ಟೊರೇಟ್ ಒಂದನ್ನು ಕೂಡಲೇ ಸ್ಥಾಪನೆ ಮಾಡಬೇಕೆಂಬ ಯೋಚನೆ ಇರುವುದು ನಮ್ಮೆಲ್ಲರಿಗೂ ಗೊತ್ತಿದೆ. ಇದನ್ನು ಜರೂರಾಗಿ ಸ್ಥಾಪನೆ ಮಾಡಿ, ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಅನುಭವ ಪಡೆದಿರುವ ಖಾಸಗಿ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚನೆಮಾಡಿ, ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವುದಕ್ಕೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಆದರೆ ಒಂದು ವಿಷಯ. ಈ ಸಾರಿ ಹಣದ ಅಭಾವದಿಂದ ನಮ್ಮ ಸಂಸ್ಥಾನದಲ್ಲಿ ಪ್ರಾರಂಭಿಸಿದ್ದ ಅನೇಕ ಸಣ್ಣ ಗ್ರಾಮಾಂತರ ಕೈಗಾರಿಕೆಗಳನ್ನು (ಎಂದರೆ ಕಾಟೇಜ್ ಇಂಡಸ್ಟ್ರೀಸ್) ತೆಗೆದು ಹಾಕಿದ್ದಾರೆ. ಇದು ಸಾಧುವಾದ ಮಾರ್ಗವಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಮಹಾತ್ಮಾ ಗಾಂಧಿಯವರ ಧ್ಯೇಯ, ವಿಶ್ವೇಶ್ವರಯ್ಯನವರ ಧ್ಯೇಯ ಮತ್ತು ಕುಮಾರಪ್ಪನವರ ಧ್ಯೇಯವಾದರೂ ದೊಡ್ಡದೊಡ್ಡ ಕೈಗಾರಿಕೆಗಳೊಡನೆ ಸಣ್ಣಸಣ್ಣ ಕೈಗಾರಿಕೆಗಳೂ ಬೆಳೆಯುವಂತೆ ಮಾಡಬೇಕೆಂಬುದೇ ಆಗಿದೆ. ಹೀಗಿದ್ದೂ ಇದನ್ನು ತೆಗೆದುಹಾಕಿರುವುದು ಅಷ್ಟು ನ್ಯಾಯವಲ್ಲವೆಂದು ಕಾಣುತ್ತದೆ. ಆದರೆ ಹಣದ ಅಭಾವದಿಂದ ತಾತ್ಕಾಲಿಕವಾಗಿ ಸರ್ಕಾರದವರು ಹೀಗೆ ಮಾಡಿದ್ದಾರೆಂದು ನಂಬಿದ್ದೇನೆ. ಈ ಸಂದರ್ಭದಲ್ಲಿ ಸರ್ಕಾರದವರಿಗೆ ಮತ್ತೊಂದು ಸಲಹೆಯನ್ನು ಸೂಚಿಸಲಿಚ್ಛಿಸುತ್ತೇನೆ. ಈ ಕೈಗಾರಿಕೆಯನ್ನು ತೆಗೆದುಹಾಕಿರುವ ಸಂದರ್ಭದಲ್ಲಿ ಅದನ್ನು ಹೇಳಬೇಕಾಗಿದೆ. ಹಿಂದಿನ ಸರ್ಕಾರದವರು ಒಂದು ಯೋಜನೆಯನ್ನು ತಮ್ಮ ಮುಂದಿಟ್ಟುಕೊಂಡಿದ್ದರು. ಗ್ರಾಮ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಯಾವ ಖಾಸಗಿ ಮನುಷ್ಯರು—ಹೆಚ್ಚು ಅನುಭವವನ್ನು ಪಡೆದಿರುವ ತಜ್ಞರು—ಯಾರಾದರೂ ಜಪಾನ್, ಚೈನಾ ಮುಂತಾದ ದೇಶಗಳಿಗೆ ಹೋಗಿ ಅಲ್ಲಿ ಈ ಕೈಗಾರಿಕೆಯ ಅನುಭವವನ್ನು ಪಡೆಯಬೇಕೆಂದು ಅರ್ಜಿ ಹಾಕಿಕೊಂಡರೆ, ಅವರ ಖರ್ಚಿನಲ್ಲಿ ಸರ್ಕಾರದವರು ಅರ್ಧ ಖರ್ಚನ್ನು ವಹಿಸಿ ಅಂಥವರನ್ನು ಅಲ್ಲಿಗೆ ಕಳುಹಿಸಿ ಕೊಡಬೇಕೆಂದು ಒಂದು ಯೋಜನೆಯನಿಟ್ಟುಕೊಂಡಿದ್ದರು. ಈ ಹೊತ್ತು ಆ ಯೋಜನೆಗೆ ನಮ್ಮ ಹೊಸ ಮಂತ್ರಿಮಂಡಲ ಬೆಂಬಲಕೊಟ್ಟರೆ ಅದರಿಂದ ಪ್ರಯೋಜನವಿದೆ. ಕೇವಲ ಒಂದು ಲಕ್ಷ ರೂಪಾಯಿಗಳನ್ನು ಇದಕ್ಕೆ ಒದಗಿಸಿದ ಪಕ್ಷದಲ್ಲಿ ಸುಮಾರು 25 ಜನರನ್ನು ಜಪಾನ್ ಚೈನಾ ದೇಶಗಳಿಗೆ ಕಳುಹಿಸಿಕೊಡಬಹುದು. ಹಾಗೆ ಹೋಗುವ ಮನುಷ್ಯನಿಗೆ 5 ಸಾವಿರ ಖರ್ಚು ಕೊಟ್ಟರೆ ಅವನು ಇನ್ನೂ 5 ಸಾವಿರ ರೂಪಾಯಿ ಹಾಕಿಕೊಂಡು ಹೋಗಿ ಪರಿಶ್ರಮ ಪಡೆದು ಬಂದು ಇಲ್ಲಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಾಗಬಹುದು. ಇದನ್ನು ನಮ್ಮ ಸರ್ಕಾರದವರು ಕಾರ್ಯರೂಪಕ್ಕೆ ತರುತ್ತಾರೆಂದು ನಂಬಿದ್ದೇನೆ.

ಮೂರನೆಯದಾಗಿ, ನಮ್ಮ ಸರ್ಕಾರದ ಪಾನನಿರೋಧನೀತಿ. ಇದನ್ನು ನಮ್ಮ ಸರ್ಕಾರದವರು ದಿಟ್ಟತನದಿಂದ ಪ್ರತಿಪಾದಿಸಿಕೊಂಡು ಹೋಗುತ್ತಿದ್ದಾರೆ.

(ಶ್ರೀ ಕೆ. ಲಕ್ಕಪ್ಪನವರು.)

ಮೊನ್ನೆ ತಾನೆ ಆರ್ಯವಿದ್ಯಾಶಾಲೆಯ ಸಮಾರಂಭದಲ್ಲಿ ನಮ್ಮ ಮುಖ್ಯಮಂತ್ರಿಗಳು ನಮ್ಮ ಸರ್ಕಾರದ ನೀತಿಯನ್ನು ದೃಢಪಡಿಸಿದರು. ನಮ್ಮ ಸರ್ಕಾರದ ಧೂಳೀಪತನವಾದರೂ ಚಿಂತೆಯಿಲ್ಲ, ಪಾನನಿರೋಧ ನೀತಿಯನ್ನು ನಾವು ಕೈಬಿಡುವುದಿಲ್ಲ, ಮುಂದೆಯೂ ಅನುಸರಿಸಿಕೊಂಡು ಹೋಗುತ್ತೇವೆ ಎಂದು ಘಂಟಾಘೋಷವಾಗಿ ಸಾರಿದರು. ಖಂಡಿತವಾಗಿಯೂ ಅವರು ಈ ನೀತಿಯನ್ನು ಮುಂದುವರಿಸಬೇಕೆಂದು ನನ್ನ ಅಭಿಪ್ರಾಯವಾಗಿದೆ. ಈ ವರ್ಷವೂ ಇದನ್ನು ಇನ್ನೂ ಮುಂದುವರಿಸುವುದಕ್ಕೆ ಪ್ರಯತ್ನಮಾಡಬೇಕಾಗಿತ್ತು. ಆದರೆ ಹಣಕಾಸಿನ ದುಃಸ್ಥಿತಿಯಿಂದ ಕೊಂಚಕಾಲಮಾತ್ರ ಮುಂದೆ ಹಾಕಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಹಾಸನ ಜಿಲ್ಲೆಯಲ್ಲಿ ಮುಂದುವರಿಸಬೇಕೆಂದು ಈ ವರ್ಷ ಒಂದು ನಿಯೋಗಬಂದಿತ್ತು. ಆಗ ಹಣಕಾಸಿನ ಪರಿಸ್ಥಿತಿಯನ್ನರಿತು ಈ ವರ್ಷ ಸುಮ್ಮನಿರುವುದು ಒಳ್ಳೆಯದೆಂದು ಅಷ್ಟಾಗಿ ಒತ್ತಾಯಮಾಡಲಿಲ್ಲ. ಆದರೆ ಮುಂದಿನ ವರ್ಷ ಖಂಡಿತವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನಮಾಡಬೇಕೆಂದು ಮುನ್ಸೂಚನೆ ಕೊಡುತ್ತೇನೆ. ಹಾಗೆ ಮುಂದುವರಿಸಬೇಕೆಂದು ಪ್ರಾರ್ಥನೆ. ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ. ಈ ಪಾನ ನಿರೋಧವನ್ನನುಸರಿಸತಕ್ಕ ಕಾಲದಲ್ಲಿ ಎಲ್ಲಿ ಪಾನ ನಿರೋಧವಿದೆಯೋ ಅಲ್ಲಿ ಕಳ್ಳಭಟ್ಟಿ ನಡೆಯುತ್ತಿದೆಯೆಂದು ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳಿಂದ ನಮಗೆ ಗೊತ್ತಾಗುತ್ತದೆ ಇದನ್ನು ತಡೆಗಟ್ಟಲು ಹೆಚ್ಚು ಆಸಕ್ತಿ ವಹಿಸಬೇಕು. ಇದಕ್ಕೆ ಈಗಾಗಲೇ ಅನೇಕ ಕಾರ್ಯಕ್ರಮಗಳನ್ನು ಹೊಸಮಂತ್ರಿ ಮಂಡಲದವರು ಕೈಕೊಂಡಿದ್ದಾರೆ. ಇವುಗಳ ಜೊತೆಯಲ್ಲಿ ಇನ್ನೊಂದು ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಸೂಚಿಸುತ್ತೇನೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಸೇವಾದಳಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಮುಡಿಪಾಗಿಟ್ಟಿದ್ದಾರೆ. ಹಿಂದೆ ಹೋಂ ಗಾರ್ಡ್ಸ್ ಇದ್ದರು. ಅವರು ಯಾರಾರು ಕಳ್ಳಸಂತೆ ವ್ಯಾಪಾರಮಾಡುತ್ತಿದ್ದರೋ ಅವರನ್ನು ಹಿಡಿದು ಕಾಳಸಂತೆಯನ್ನು ತಡೆಗಟ್ಟುವ ಪ್ರಯತ್ನ ಮಾಡುತ್ತಿದ್ದರು. ಅದೇ ರೀತಿ ಸೇವಾದಳದವರು ತಮ್ಮ ಕಾರ್ಯಕ್ರಮದಲ್ಲಿ ಕಳ್ಳಭಟ್ಟಿ ಇಳಿಸುವುದನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡಿದರೆ ಬಹುಮಟ್ಟಿಗೆ ಇದನ್ನು ತಡೆಗಟ್ಟಲು ಅವಕಾಶವಾಗುತ್ತದೆ. ಈ ಕೆಲಸವನ್ನು ಸೇವಾದಳದವರಿಗೆ ವಹಿಸಬೇಕೆಂದು ಸೂಚಿಸುತ್ತೇನೆ.

ಇನ್ನೂ ಅನಿಮಲ್ ಹಸ್‌ಬೆಂಡ್ರಿ ವಿಚಾರದಲ್ಲಿಯೂ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ತೋರಿಸಿದ್ದಾರೆ. ಕೀ ಫಾರಂ ಸ್ಕೀಂ ಎಂದು ಒಂದು ಯೋಜನೆ ಹಾಕಿ ದನಗಳ ತಳಿಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮನಸ್ಸು ಮಾಡಿದ್ದಾರೆ. ಆದರೂ ಈ ಸಂದರ್ಭದಲ್ಲಿ ಅವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಮಲೆನಾಡಿನಲ್ಲಿ ದನಗಳ ತಳಿ ಬಹಳ ಹಿಂದೆ ಬಿದ್ದಿದೆ. ಅಲ್ಲಿ ಗುಜ್ಜು ದನಗಳೇ ಹೆಚ್ಚು. ಒಳ್ಳೆಯ ತಳಿಯನ್ನು ಮಾಡಲು ಯಾವ ಪ್ರಯತ್ನವೂ ನಡೆದಿಲ್ಲ. ಈ ಯೋಜನೆಯ ಮೂಲಕ ಸರಿಯಾದ ಹೊಸತಳಿಗಳನ್ನು ತಯಾರು ಮಾಡಬೇಕು. ಮಲೆನಾಡಿನವರಿಗೆ ಸ್ಟಡ್ ಬುಲ್‌ಗಳನ್ನು ಸರಬರಾಯಿ ಮಾಡಿ ಅಲ್ಲಿನ ತಳಿಯನ್ನು ಅಭಿವೃದ್ಧಿಪಡಿಸಲು ಪ್ರಯತ್ನಮಾಡಬೇಕಾಗಿದೆ. ಗೋಸಂರಕ್ಷಣಾ ಸಮಿತಿ ಎಂಬ ಸಂಸ್ಥೆ ಪ್ರಾರಂಭವಾಗಿ ಅವರು ಉತ್ತಮ ತಳಿಗಳನ್ನು ತಯಾರು ಮಾಡುವ ಕಾರ್ಯಕ್ರಮ ಹಾಕಿಕೊಂಡು ಸರ್ಕಾರದ ಸಹಾಯವನ್ನು ನಿರೀಕ್ಷಿಸುತ್ತಿದ್ದಾರೆಂದು ತಿಳಿದು ಬಂದಿದೆ. ಅವರಿಗೆ ಸಹಾಯವನ್ನು ಕೊಟ್ಟು ಈ ಮೂಲಕವೂ ತಳಿಗಳನ್ನು ಹೆಚ್ಚು ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಿಕೊಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ ಇನ್ನೊಂದು ವಿಚಾರಹೇಳಬೇಕಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ನಮ್ಮ ಸರ್ಕಾರದವರು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ನಮ್ಮ ವ್ಯವಸಾಯಾಭಿವೃದ್ಧಿಗಾಗಿ ಅನೇಕ ಸಂಶೋಧನಾಲಯಗಳನ್ನು ಏರ್ಪಾಡು ಮಾಡಿದ್ದಾರೆ. ಇದರ ಜೊತೆಗೆ ಮಂಡ್ಯಜಿಲ್ಲೆಯಲ್ಲಿ ಒಂದು ಫೋರ್ಡ್ ಫೌಂಡೇಷನ್ ಯೋಜನೆಗೂ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕಮ್ಯೂನಿಟಿ ಪ್ರಾಜೆಕ್ಟಿಗೂ ವಿಶೇಷ ಹಣಗಳನ್ನು ಹಾಕಿ ಅವುಗಳನ್ನು ಜಾರಿಗೆ ತಂದಿದ್ದಾರೆ. ಇದು ಸರ್ಕಾರದವರ ಮೇಲೆ ಬಿದ್ದಿರುವ ಕರ್ತವ್ಯವೆಂದು ನಂಬಿ ಅವರು ನಿಜವಾಗಿಯೂ ರೈತವರ್ಗದವರಿಗೆ ಸಹಾಯಮಾಡಿದ್ದಾರೆ. ಇದೇರೀತಿ ಅವರು ಇನ್ನೂ ಹೆಚ್ಚು ಹೆಚ್ಚಿನ ಸಹಾಯಗಳನ್ನು ಈ ವರ್ಗಕ್ಕೆ ಕಲ್ಪಿಸಿಕೊಡುತ್ತಾರೆಂಬ ನಂಬಿಕೆಯೂ ನನಗಿದೆ. ಈ ದಿವಸ ಅವರು ನಮ್ಮ ಮುಂದೆ ಮಂಡಿಸಿರತಕ್ಕ ಬಡ್ಜೆಟ್ ಸರ್ವ ರೀತಿಯಲ್ಲೂ ತೃಪ್ತಿಕರವಾಗಿದೆ. ಆದರೆ ಎಲ್ಲೋ ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ನ್ಯೂನತೆಗಳು ಕಂಡು ಬರುತ್ತಿವೆ. ಅವುಗಳನ್ನೆಲ್ಲಾ ಮುಂದಕ್ಕೆ ಸರಿಪಡಿಸಿಕೊಳ್ಳುತ್ತಾರೆಂದು ನಂಬಿದ್ದೇನೆ. ನಮ್ಮ ಸಂಸ್ಥಾನವು ಪ್ರಗತಿ ಮಾರ್ಗದಲ್ಲಿ ಮುಂದುವರಿಯುತ್ತಾ ಹೋಗಲು ಇಂಥ ತೃಪ್ತಿಕರವಾದ ಹಣಕಾಸಿನ ಪಟ್ಟಿಯ ತಯಾರಿಕೆ ಬಹಳ ಸಹಾಯಕವಾಗಿದೆ. ಈಗ ಅಂಥ ತೃಪ್ತಿಕರವಾದ ಬಡ್ಜೆಟ್ಟನ್ನು ಈ ಮಂತ್ರಿಮಂಡಳಿ ನಮ್ಮ ಮುಂದಿಟ್ಟಿರುವುದಕ್ಕೆ ನನ್ನ ಸಂತೋಷವನ್ನು ಮತ್ತೊಮ್ಮೆ ವ್ಯಕ್ತಪಡಿಸಿ, ನಾನು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Mr. SPEAKER.—I may inform the House that usually on the last and third day every Member who has not so far taken part in the discussion is very eager to speak. There may not be much time for such Members. Some of them may be disappointed; they may not be given any chance and the time-limit also may be reduced. So it is advised that to-day and to-morrow a good number of Members take part in the debate.

Sri B. NARAYANASWAMY (Mysore City South).—It is a matter of great gratification to know that our Chief Minister *cum* Finance Minister has laid before us a very good budget. I was surprised to hear from my friend Mr. Thomas styling this budget as a dull budget. I never heard a budget being called a dull or active budget. It is usual for the Opposition to say that a budget is not a poor man's budget or that it is a capitalist budget. At the very outset, I would like to call this a very realistic budget and every man's budget. The Chief Minister has to be credited for the realistic

approach he has taken in tackling financial matters and in a way he has proved that he is an expert financier.

As a matter of fact, I want only to offer some general remarks on this budget because I am not good at figures and I cannot remember these figures ; so I will not trouble this House by quoting figures and I leave it to my friends. I am very glad to see from the budget certain salient features. I think even the Opposition has to accept under what circumstances and conditions this budget has been prepared. This new Government has entered upon its duty under very grave circumstances, *viz.*, that it had to face a deficit budget. Secondly, all of a sudden, the Central Government stopped food subsidy and a huge budget deficit was anticipated. It is very good of the Finance Minister to have made a very sincere attempt to reduce this huge gap of deficit of nearly Rs. 3 crores to nearly one crore of rupees and that he has done by taking a bold step in his food policy and in other matters.

One redeeming feature in the budget is that they have not imposed a fresh taxation and people have not been burdened. It was expected by many of us here that to balance the budget the Finance Minister would impose some fresh taxation. I am very glad he has gone to the length of telling us that he is not going to impose any fresh taxation unless circumstances warrant it.

Secondly, this budget has great promises. In spite of its being a deficit budget and in spite of dwindling revenue and great expenditure, they have made provision for big capital works. Nearly Rs. 459 lakhs have been provided for capital works like Hydro-Electric Works, Irrigation Projects, etc.

From revenue resources a sum of Rs. 1,010 lakhs has been provided for nation building activities. I would like to ask the Opposition whether that is not a very good figure to be congratulated upon. Out of this a sum of Rs. 378 lakhs has been provided for Education. Nowhere in India has such a huge amount been set apart for Education. Nearly 25 per cent of the normal revenue has been set apart for educational purposes. I see from the budget, this time for University education an addition of Rs. 2 lakhs has been provided and the University should thank this Government for having provided this additional sum. I know a time was when the University was demanding a higher grant and the previous Government was refusing to give it. This time I see an additional grant and so the University authorities should be grateful to this Government. But in this connection I would like to say that though, no doubt, a very heavy amount has been provided for education, I want the Government to stop further appointment of any Committees. There is no use in simply appointing Committees to suggest reforms. I see that Dr. Rathnaswamy is going to be appointed or some such rumour is afloat. I am sure our Education Minister will not give room for any such suggestion or go in for the appointment of any committee. What we want is that any reform that is considered necessary should be immediately implemented and that education should be according to our needs and not simply follow some western methods. The budget is also very promising in this respect, namely, Rs. 72 lakhs financial aid has been provided for agriculture and, for medical relief, an additional grant of Rs. 6 lakhs has been provided.

3 P.M.

The Budget that is now presented is really a very good budget and I am sure that any criticism that is to be offered by the Opposition would fall flat against this realistic approach that has been made by the Chief Minister *cum* Finance Minister.

I take this opportunity of congratulating the Government for the bold step they have taken in launching the food policy, though they have incurred displeasure of some section of the public which had offered Satyagraha before the Grain Depots. I do not know for whose sake it was done. I saw in Mysore one section or one

(SRI B. NARAYANASWAMY.)

party indulging in such activities it was ludicrous. In spite of all these odiums the Government have taken a very bold step in its food policy. Though it has raised the price of food grains, it had to be done because it somehow or other had to meet the loss of subsidy from the Central Government.

I am coming to a finish. I close my speech with one appeal to all Members. As Legislators we are bound by a common task that is before us to our electors. We should do whatever that is in our power to see that the poor man gets his share of help from Government and in this connection our budget has contemplated to implement the five-year plan and at the same time it is said that the plan cannot be implemented unless there is financial aid from the Centre. I see from the Chief Minister's speech that a Memorandum has been submitted to the Finance Commission. It is our duty that we should all put our efforts and make a common object to support the Chief Minister in his request to the Finance Commission to kindly recommend to the Central Government to come to our aid so that we may maintain a standard of administration so as to enable us to be in the vanguard among the States. We are known to be in the vanguard of some of the progressive States and that position has to be maintained. For that we should support this Government in their request to the Finance Commission to recommend to the Central Government to grant all financial assistance to our plans and make our country prosper and help our people to become great. Thank you.

MR. SPEAKER.—The House will now rise for lunch and meet again after half an hour.

The Assembly adjourned at Four Minutes past Three of the Clock and re-assembled at Thirty-seven Minutes past Three of the Clock.

[Mr. Speaker in the Chair.]

ಶ್ರೀ ಮುಲ್ಕಗೋವಿಂದರೆಡ್ಡಿಯವರು (ಚಿತ್ರದುರ್ಗ).—ಸ್ವಾಮಿ, ಸ್ವಾತಂತ್ರ್ಯಬಂದಿದೆ. ಆದರೆ ರಾಜಕೀಯ ಸ್ವಾತಂತ್ರ್ಯ ಬಂದಿದೆ; ಆರ್ಥಿಕಸ್ವಾತಂತ್ರ್ಯವಿನ್ನೂ ನಮ್ಮ ಜನತೆಗೆ ಬಂದಿಲ್ಲ.ಇದು ಬಹಳ ಶೋಚನೀಯವಾದ ವಿಷಯವಾಗಿದೆ. ರಾಜಕೀಯ ಸ್ವಾತಂತ್ರ್ಯ ಬಂದಿದ್ದರೂ ಕೂಡ ಇನ್ನೂ ಕೆಲವು ವಿಚಾರಗಳಲ್ಲಿ ಸ್ವತಂತ್ರ ರಾಷ್ಟ್ರಗಳು ಯಾವರೀತಿ ಹೋಗಬೇಕು, ಯಾವ ಮಾರ್ಗ ಅನುಸರಿಸಬೇಕು ಎಂಬ ವಿಷಯದಲ್ಲಿ ನಾವು ಹಿಂದುಳಿದಿದ್ದೇವೆ. ನಮ್ಮ ಇಂಡಿಯಾದೇಶದ ರಾಜ್ಯಾಂಗಕ್ಕೆ ನಾವು ಒಂದು ಅಲೀಜಿಯನ್ಸ್ ತೆಗೆದುಕೊಂಡಿದ್ದೇವೆಂದು ಮೊನ್ನೆಯೇ ಹೇಳಿದ್ದೇನೆ. ಅದೇ ರೀತಿಯಲ್ಲಿ ಸಭಾ ನಾಯಕರು ಹೇಳಿರುವುದೂ ಬಹಳ ಶ್ಲಾಘನೀಯವಾಗಿದೆ. ಅದಕ್ಕಿಂತ ಇನ್ನೂ ಒಂದು ಹೆಜ್ಜೆ ನಮ್ಮ ಸರ್ಕಾರ ಮುಂದೆ ಹೋಗಬೇಕು. ಈ ದಿವಸ ಕಾಶ್ಮೀರದಲ್ಲಿ ಷೇಕ್ ಅಬ್ದುಲ್ಲಾರವರು ಯಾವರೀತಿ ಒಂದು ಪ್ರಜಾ ಸ್ವಾತಂತ್ರ್ಯದ ಹಾದಿಯಲ್ಲಿ ಹೋಗಬೇಕೆಂದಿದ್ದಾರೋ ಅದೇರೀತಿಯನ್ನು ಇಲ್ಲೂ ಕೂಡ ಅನುಸರಿಸಿದರೆ ಬಹಳ ಉತ್ತಮವಾಗುತ್ತದೆ. ಸ್ವಾತಂತ್ರ್ಯ ಬಂದಮೇಲೆ ನಮ್ಮ ದೇಶದ ಜನರ, ಅದರಲ್ಲಿಯೂ ಬಡಜನರ, ಜೀವನದ ಮಟ್ಟ ಬಹಳ ಕೆಳಕ್ಕೆ ಇಳಿಯುತ್ತಿದೆ. ಪ್ರತಿಯೊಂದು ವಸ್ತುವಿನ ಬೆಲೆ ಜಾಸ್ತಿಯಾಗುತ್ತಿದೆ. ಅವರಿಗೆ ತಕ್ಕಂಥ ಅವಕಾಶವೂ ಅನುಕೂಲತೆಗಳೂ ಕಡಮೆಯಾಗುತ್ತಿವೆ. ಇದೆಲ್ಲಾ ಸರಿಹೋಗಬೇಕಾದರೆ ಸೋಷಿಯಲ್ ಮತ್ತು ಎಕನಾಮಿಕ್ ಸ್ಟ್ರಕ್ಚರ್ ಮಾರ್ಪಾಡಾಗಬೇಕು. ಅದಾಗುವವರೆಗೆ ಜನತೆಯ ಏಳಿಗೆಗಾಗಿ ನಾವು ದುಡಿಯುತ್ತೇವೆಂದು ಹೇಳಿದರೆ ತಪ್ಪಾಗುತ್ತದೆ. ಜನತೆಗೆ ಹೆಚ್ಚು ಅನುಕೂಲವಾಗಬೇಕಾದರೆ ಈಗಿರುವ ಜಮೀನು ವ್ಯವಸ್ಥೆ, ಒಂದು ಪದ್ಧತಿ ಏನಿದೆಯೋ ಅದು ಪೂರ್ಣವಾಗಿ ಮಾರ್ಪಾಡಾಗಬೇಕು. ಆರೀತಿಯಾಗಿ ಮಾರ್ಪಾಡಾಗದಿದ್ದರೆ ವ್ಯವಸಾಯಾಭಿವೃದ್ಧಿಗಾಗಿ, ದೇಶದ ಏಳಿಗೆಗಾಗಿ ಜನತೆಯಾಗಲಿ ಸರ್ಕಾರವಾಗಲಿ ದುಡಿಯುವುದಕ್ಕಾಗುವುದಿಲ್ಲ. ಭೂಸುಧಾರಣೆಯಾಗದಿದ್ದರೆ ಒಂದು ದೇಶಕ್ಕೆ ಬರುವ ಉತ್ಪತ್ತಿಯನ್ನೂ ವ್ಯವಸಾಯದ ಉತ್ಪನ್ನವನ್ನೂ ಜಾಸ್ತಿಮಾಡುವುದಕ್ಕಾಗುವುದಿಲ್ಲ. ಬೇರೆ ದೇಶಗಳಲ್ಲಿ ಸ್ವಾತಂತ್ರ್ಯಬಂದಮೇಲೆ ಅನೇಕ ಕ್ರಾಂತಿಕಾರಕವಾದ ಬದಲಾವಣೆಗಳನ್ನು ಮಾಡಿದ್ದಾರೆ. ನಮ್ಮ ಪಕ್ಕದಲ್ಲಿರುವ ಚೈನಾದೇಶದಲ್ಲಿ ಭೂಮಿಯ ವಿಷಯದಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿದಮೇಲೆ ನಮ್ಮ ಇಂಡಿಯಾ ದೇಶದ ಎರಡರಷ್ಟು ಉತ್ಪತ್ತಿಯಾಗುತ್ತಿದೆ. ಹಾಗೆ ಬದಲಾವಣೆ ಮಾಡುವುದಕ್ಕೆ ಮೊದಲು ಅಲ್ಲೂ ಕ್ಷಾಮವಿತ್ತು. ಈಗ ಚೈನಾ ದೇಶದಲ್ಲಿ ಭೂಮಿ ಹಂಚಿಕೆಯ ವಿಷಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಮಾಡಿರುವುದರಿಂದ ಉಳುವವನಿಗೆ ಭೂಮಿಯ ಹಕ್ಕನ್ನೂ ಕೊಟ್ಟಿರುವುದರಿಂದ ಅಲ್ಲಿ ಉತ್ಪತ್ತಿ ಜಾಸ್ತಿಯಾಗಿ ಕ್ಷಾಮಪೀಡಿತ ಪ್ರದೇಶಗಳಿಗೆ ಈಗ ಸ್ವಲ್ಪಮಟ್ಟಿಗೆ ಅವರು ಅಕ್ಕಿ ಮುಂತಾದುವನ್ನು ಕಳುಹಿಸುತ್ತಿದ್ದಾರೆ. ನಮ್ಮ ಇಂಡಿಯಾ ದೇಶಕ್ಕೂಕೂಡ ಚೈನಾದಿಂದ ಈಗ ಅಕ್ಕಿ ಬರುತ್ತಾ ಇದೆ. ಆದ್ದರಿಂದ ಈ ಕ್ಷಾಮ ಹೋಗಬೇಕೆಂದು ಹೇಳಿದರೂ ಕೂಡ, ಜನತೆ ಮುಂದುವರಿಯಬೇಕೆಂದು ಹೇಳಿದರೂ ಕೂಡ, ಲ್ಯಾಂಡ್ ಸಿಸ್ಟಂ ಏನಿದೆಯೋ ಅದನ್ನು ಮಾರ್ಪಾಡು ಮಾಡಬೇಕು. ಅದು ಕ್ರಾಂತಿಕಾರಕವಾದ ರೀತಿಯಲ್ಲಿ ಆಗಬೇಕು. ಇಲ್ಲದಿದ್ದರೆ, ಇದೇರೀತಿಯಲ್ಲಿ ಹೋದರೆ ನಮ್ಮ ಉತ್ಪತ್ತಿ ಹೆಚ್ಚುವುದಕ್ಕೆ ಸಾಧ್ಯವಾಗುವುದಿಲ್ಲ, ಆಹಾರ ಪರಿಸ್ಥಿತಿ ಬದಲು ಮಾಡುವುದಕ್ಕೆ ಆಗುವುದಿಲ್ಲ. ಬಹಳ ತೊಂದರೆಯಾಗುತ್ತದೆ. ಯಾರು ಉಳುತ್ತಾರೆಯೋ ಕಷ್ಟ

ಪಡುತ್ತಾರೆಯೋ ಅವರು ಅದರ ಫಲ ಅನುಭವಿಸಬೇಕಾದದ್ದು ನ್ಯಾಯವಾದದ್ದು, ಸತ್ಯವಾದದ್ದು. ಅದನ್ನು ಬಿಟ್ಟು ಕೆಲವೇ ಜನ ಜಮೀನನ್ನು ಅವರ ವಶದಲ್ಲಿಟ್ಟುಕೊಂಡು ಉಳುವವರಿಗೆ ಸರಿಯಾದ ರೀತಿಯಲ್ಲಿ ಪಾಲು ಕೊಡದಿದ್ದರೆ ಉತ್ಪತ್ತಿ ಜಾಸ್ತಿಮಾಡುವುದಕ್ಕೆ ಆಗುವುದಿಲ್ಲ. ಒಂದು ತರಹ, ಮೊದಲೇ ನಾನು ಪೀಠಿಕೆಯಲ್ಲಿ ಹೇಳಿದಹಾಗೆ, ಸಮಾನತೆ ಇರುವುದಿಲ್ಲ, ಆಗಬೇಕಾದದ್ದು ಆಗುವುದಿಲ್ಲ. ಎಕ್ಸ್‌ಪ್ಲಾಯಿಟೇಷನ್ ಹೋಗಬೇಕೆಂದು ಎಷ್ಟು ಆಶೆಯಿಂದ ಹೇಳುತ್ತಾರೆಯೋ ಅದು ಹೋಗುವುಕ್ಕೆ ಯಾವ ದಾರಿಯನ್ನೂ ಬಡ್ಜೆಟ್‌ನಲ್ಲಿ ಈಗ ತೋರಿಸುತ್ತಾ ಇಲ್ಲ.

ಆಹಾರದ ವಿಷಯ ತೆಗೆದುಕೊಳ್ಳಿ. ಮೊದಲು ಮೂರು ನಾಲ್ಕು ವರ್ಷಗಳ ಕೆಳಗೆ ಆಹಾರ ಎಷ್ಟು ಸುಲಭ ದರದಲ್ಲಿ ಸಿಕ್ಕುತ್ತಾಇತ್ತೋ ಅದಕ್ಕೆ ಎರಡರಷ್ಟು ಬೆಲೆ ಈಗ ಆಗಿದೆ. ಮೈಸೂರು ದೇಶದಲ್ಲಂತೂ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆಹಾರದ ಬೆಲೆ ಹೆಚ್ಚಿಸಿದ್ದಾರೆ. ಆಹಾರದ ಬೆಲೆ ಹೆಚ್ಚಿ ಪಟ್ಟಣಗಳಲ್ಲಿರತಕ್ಕ ಜನರಿಗೆ, ಮಧ್ಯಮ ವರ್ಗದವರಿಗೆ, ಕೂಲಿಗಾರರಿಗೆ, ಹಳ್ಳಿಗಳಲ್ಲಿರತಕ್ಕ ಜಮೀನಿಲ್ಲದ ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ನೋಡಿದರೆ ನಮ್ಮ ಸರ್ಕಾರ ಬಹಳ ಇನ್‌ಕಾಂಪಿಟೆಂಟ್, ಇನ್‌ಎಫಿಷೆಂಟ್ ಆಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ಪಕ್ಕದಲ್ಲಿರುವ ಬೊಂಬಾಯಿಗೆ ಸಬ್‌ಸಿಡಿ ಕೊಟ್ಟಿದ್ದಾರೆ, ದೆಹಲಿಗೆ ಸಬ್‌ಸಿಡಿ ಕೊಟ್ಟಿದ್ದಾರೆ, ಬಿಹಾರಕ್ಕೆ ಸಬ್‌ಸಿಡಿಕೊಟ್ಟಿದ್ದಾರೆ. ಈ ರೀತಿ ಕೇಂದ್ರ ಸರ್ಕಾರದವರು ಅವರಿಗೆಲ್ಲಾ ಸಬ್‌ಸಿಡಿ ಕೊಟ್ಟಿರುವಾಗ ಮೈಸೂರಿನಿಂದ ಅನೇಕ ದೊಡ್ಡ ದೊಡ್ಡ ಆದಾಯದ ಬಾಬುಗಳನ್ನು ತೆಗೆದುಕೊಂಡಾಗ್ಯೂ ಮೈಸೂರಿನವರಿಗೆ ಏನೂ ಕೊಡಲಿಲ್ಲ ಎಂದರೆ ಬಹಳ ಆಶ್ಚರ್ಯವಾಗುತ್ತದೆ. ನಮ್ಮ ಸರ್ಕಾರ ಈ ದೇಶದಲ್ಲಿ ಬೆಲೆ ಏರಿಕೆಯಿಂದ ಜನರಿಗೆ ಯಾವರೀತಿ ಅನಾನುಕೂಲವಾಗುತ್ತಾಇದೆ, ಯಾವರೀತಿ ತೊಂದರೆ ಯಾಗುತ್ತಾ ಇದೆ ಎಂಬ ಒಂದು agitation ನ್ನು ಮುಚ್ಚಿಟ್ಟು, ತಾವೇ ದೊಡ್ಡಗೌರವ ಪಡೆದುಕೊಳ್ಳಬೇಕೆಂದು ಹೇಳಿ, ಬಡ ಜನರ ಹೊಟ್ಟೆಯ ಮೇಲೆ ಕಲ್ಲು ಹಾಕುತ್ತಾಇದ್ದಾರೆ. ಇದು ಬಹಳ ಅನ್ಯಾಯ. ನಮ್ಮ ದೇಶದಲ್ಲಿ ಕ್ಷಾಮ ಆಗಿಂದಾಗ ಬರುತ್ತಾ ಇದೆ. 1946 ರಲ್ಲಿ ಕ್ಷಾಮ ಬಂದಾಗ ಜವಾಬ್ದಾರಿ ಸರ್ಕಾರ ಇಲ್ಲದೇ ಇದ್ದರೂ ಕೂಡ ಅನೇಕ ವಿಧಗಳಲ್ಲಿ ಜನರಿಗೆ ಆಗಿನ ಸರ್ಕಾರ ಸಹಾಯ ಮಾಡುತ್ತಾ ಇತ್ತು. ಆಗ ವೈಸ್‌ರಾಯ' ಆಗಿದ್ದವರೂ ಕೂಡ ನಮ್ಮ ಮೈಸೂರು ದೇಶಕ್ಕೆ ಬಂದು ಯಾವಾವ ರೀತಿ ಜನರಿಗೆ ಅನುಕೂಲವಾಗಬೇಕು, ಯಾವ ರೀತಿ ಜನರ ಏಳಿಗೆಗೆ ಸಹಾಯ ಮಾಡಬೇಕು, ಎಂಬುದಾಗಿ ಎಲ್ಲವನ್ನೂ ಪರಿಶೀಲಿಸಿ ಕ್ಷಾಮ ತಡೆಗಟ್ಟುವುದಕ್ಕೆ ತಕ್ಷಣ ಏನಾದರೂ ಕಾರ್ಯಕ್ರಮ ಕೈಕೊಳ್ಳುತ್ತಾ ಇದ್ದರು. ಈಗಲೂ ನಮ್ಮ ಸರ್ಕಾರ ಅಲ್ಪಸ್ವಲ್ಪ ಕೈಕೊಂಡಿದ್ದಾರೆ, ಏನೂ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಎಷ್ಟು ಪರಿಣಾಮಕಾರಿಯಾಗಿ ಈಸಮಸ್ಯೆಯನ್ನು ಬಗೆಹರಿಸಬೇಕೋಅಷ್ಟು ಮಾಡುತ್ತಾ ಇಲ್ಲ. ಮದರಾಸ್ ಪ್ರಾಂತದ ರಾಯಲ್ ಸೀಮೆಯಲ್ಲಿ ಕ್ಷಾಮ ಇದೆ. ಮದರಾಸ್ ಸರ್ಕಾರದವರು ಅಲ್ಲಿ ಯಾವರೀತಿ ಕ್ಷಾಮಇದೆ ಎಂಬುದನ್ನು ಪರಿಶೀಲಿಸಿ ಅನೇಕ ವಿಧದಲ್ಲಿ ಸಹಾಯಮಾಡಿದ್ದಾರೆ. ಅಂತೆಯೆ ಕೇಂದ್ರ ಸರ್ಕಾರದವರೂ ಕೂಡ ಸಹಾಯ ಮಾಡಿದ್ದಾರೆ. ಮೈಸೂರು ದೇಶದಲ್ಲಿ ಕೋಲಾರ, ತುಮಕೂರು, ಚಿತ್ರದುರ್ಗ ಈ ಮೂರು ಡಿಸ್ಟ್ರಿಕ್ಟ್‌ಗಳಲ್ಲೂ ಕ್ಷಾಮ ಇದೆ. ಇವು ರಾಯಲ ಸೀಮೆಗೆ ಅಂಟಿಕೊಂಡಿವೆ. ಅಲ್ಲಿರತಕ್ಕ ಕ್ಷಾಮಕ್ಕೂ ನಮ್ಮ ಕ್ಷಾಮಕ್ಕೂ ಅಷ್ಟು ವ್ಯತ್ಯಾಸ ಕಾಣುವುದಿಲ್ಲ. ಆದರೂ ಕೂಡ ನಮಗೆ ಕೇಂದ್ರ ಸರ್ಕಾರ ಮಾಡಿರುವ ಸಹಾಯ ಬಹಳ ಅಲ್ಪಸ್ವಲ್ಪ. ಇದನ್ನು ನೋಡಿದರೆ ನಮ್ಮ ಸರ್ಕಾರದವರು ನಮ್ಮ ಜನಗಳಿಗೆ ಬಂದಿರತಕ್ಕ ಕ್ಷಾಮದ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಮತ್ತು ಶ್ರದ್ಧೆಯನ್ನು ವಹಿಸಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ನಮಗೆ ಯಾವ ರೀತಿ ಸಹಾಯವೂ ಕೇಂದ್ರ ಸರ್ಕಾರದಿಂದ ಬರುತ್ತಾ ಇಲ್ಲ. ಇದು ಬಹಳ ಶೋಚನೀಯವಾದದ್ದು.

ಲ್ಯಾಂಡ್ ರೆವಿನ್ಯೂ ವಿಷಯದಲ್ಲಿ ಮೈಸೂರು ದೇಶಕ್ಕೆ ಆದಾಯ ಬರುತ್ತಾ ಇರುವುದು 1 ಕೋಟಿ 25 ಅಥವಾ 30 ಲಕ್ಷ ರೂಪಾಯಿ ಇರಬಹುದು. ಇದು ಬಹಳ ಹಳೆಯ ಪದ್ಧತಿಯಾಗಿದೆ. ಇದೇ ರೀತಿ ನಾವು ಮುಂದೆ ಹೋಗುತ್ತಾ ಇರುವುದು ನ್ಯಾಯವಾದದ್ದಲ್ಲ ಚಿಕ್ಕಚಿಕ್ಕ ಹಿಡುವಳಿದಾರರೂ ಕೂಡ ಲ್ಯಾಂಡ್ ರೆವಿನ್ಯೂ ಕೊಡಬೇಕೆಂದು ಇದೆ. ಅದರಿಂದ ಬಹಳ ತೊಂದರೆ ಯಾಗುತ್ತದೆ. ಒಟ್ಟಿನಲ್ಲಿ ಕ್ರಾಂತಿಕಾರಕವಾದ ಬದಲಾವಣೆ ಆಗಬೇಕು. ಲ್ಯಾಂಡ್ ರೆವಿನ್ಯೂ ಸಿಸ್ಟಂ ತೆಗೆದು ಹಾಕಬೇಕು. ಅದನ್ನು ತೆಗೆದುಹಾಕಿ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ದೊಡ್ಡದೊಡ್ಡ ಜಮೀನ್ದಾರರ ಮೇಲೆ ಮಾತ್ರ ಹೊರೆಬೀಳುತ್ತದೆ. 2–3–5 ಎಕರೆ ಇಟ್ಟುಕೊಂಡಿರತಕ್ಕ ಚಿಕ್ಕಚಿಕ್ಕ ಹಿಡುವಳಿದಾರರ ಮೇಲೆ ಹೊರೆ ಬೀಳುವುದಿಲ್ಲ. ಆದ್ದರಿಂದ ಚಿಕ್ಕ ಹಿಡುವಳಿಯಿರತಕ್ಕ ರೈತರಿಗೆ ಒಂದು ಹೆಚ್ಚಿನ ಪ್ರೋತ್ಸಾಹ ಕೊಟ್ಟು ಸಹಾಯ ಮಾಡಿದ ಹಾಗಾಗುತ್ತದೆ.

ಇಂಡಸ್ಟ್ರಿಯಲ್ ಪಾಲಿಸಿ ತೆಗೆದುಕೊಂಡರೆ, ನಮ್ಮ ದೇಶದಲ್ಲಿ ಯಾವ ಪಾಲಿಸಿಯೂ ಕಾಣುವುದಿಲ್ಲ. ಹಿಂದಿನಿಂದ ಸ್ಟೇಟ್ ಓನ್ಡ್ ಇಂಡಸ್ಟ್ರೀಸ್ ಇವೆ. ಅದೇ ಒಂದು ತತ್ವವನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನುಸರಿಸಿಕೊಂಡು ಬರುತ್ತಾಇಲ್ಲ. ಕೆಲವು ಇಂಡಸ್ಟ್ರೀಗಳನ್ನು ಪಬ್ಲಿಕ್‌ಗೆ ಕೊಡುತ್ತಾಇರುವುದು ಶೋಚನೀಯ ; ಇದರ ಜೊತೆಗೆ ಕೆಲವು ಇಂಡಸ್ಟ್ರೀಗಳಲ್ಲಿ ಕೆಲಸ ಮಾಡತಕ್ಕ ಕೆಲಸಗಾರರಿಗೆ ಮ್ಯಾನೇಜ್‌ಮೆಂಟ್ ಮತ್ತು ಕಂಟ್ರೋಲ್‌ನಲ್ಲೂ ಕೂಡ ಒಂದು ತರಹ ಪಾತ್ರವಹಿಸುವುದಕ್ಕೆ ಅವಕಾಶವಿರಬೇಕು. ಈ ರೀತಿ ಆದರೆ ಆ ಇಂಡಸ್ಟ್ರೀಗಳಲ್ಲಿ ಉತ್ಪನ್ನ ಜಾಸ್ತಿಯಾಗುತ್ತದೆ, ಇಲ್ಲದೆ ಇದ್ದರೆ ಆಗುವುದಿಲ್ಲ. ಇನ್ನು ಕೆಲವು ಇಂಡಸ್ಟ್ರೀಗಳಲ್ಲಿ ಲೇಬರ್ ಡಿಸ್‌ಪ್ಯೂಟ್ ಬಂದರೆ ಜಾಗ್ರತೆ ತೀರ್ಮಾನ ಮಾಡುವುದಕ್ಕೆ ಆಗುತ್ತಾಇಲ್ಲ. ಈಗ ಸರ್ಕಾರದ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಆ ರೀತಿ ಕೆಲವು ಡಿಸ್‌ಪ್ಯೂಟ್ಸ್ ಇವೆ ಎಂದು ವರ್ತಮಾನ ಇದೆ. ಸರಿಯಾದ ರೀತಿಯಲ್ಲಿ ತನಿಖೆ ನಡೆಸುತ್ತಾಇಲ್ಲ. ಸರಿಯಾದ ರೀತಿಯಲ್ಲಿ ಒಂದು ತೀರ್ಮಾನಕ್ಕೆ ಬರುತ್ತಾ ಇಲ್ಲ.

ಚುನಾವಣೆ ವಿಷಯದಲ್ಲಿ ಹೇಳಬೇಕೆಂದರೆ, ಈಗ ಬಂದಿರತಕ್ಕ ಸರ್ಕಾರ ಶೇಕಡ 44 ರಷ್ಟು ಜನರ ಓಟು ಪಡೆದು ಅಧಿಕಾರಕ್ಕೆ ಬಂದಿದೆ. ಶೇಕಡ 55 ಜನ ಮಾತ್ರ ಓಟು ಮಾಡಿದ್ದಾರೆ. ಲೆಕ್ಕ ಹಾಕಿದರೆ ಶೇಕಡ 25ರಷ್ಟು ಜನಗಳ ಓಟಿನ ಮೇಲೆ ಅಧಿಕಾರ ಗಳಿಸಿದೆ. ಎಂದರೆ ಯಾವುದೇ ಒಂದು ಕಾರ್ಯಕ್ರಮ ತೆಗೆದುಕೊಂಡರೂ ಶೇಕಡ 25 ರಷ್ಟು ಜನಗಳ ಹಿತದೃಷ್ಟಿಯಿಂದ ಮಾಡಬೇಕೆಂದಲ್ಲ, ದೇಶದ ಹಿತದೃಷ್ಟಿಯಿಂದ ಮಾಡಬೇಕು.

ರೈತರ, ಕಾರ್ಮಿಕರ ಉದ್ಧಾರಕ್ಕೆ ಹೆಚ್ಚಿನ ಪರಿಶ್ರಮ ವಹಿಸಬೇಕು. ಈಗ ಒಂದು ಸ್ಟೇಟಸ್ ಕೋ ಮೇನ್‌ಟೇನ್ ಮಾಡುವುದಕ್ಕೆ ಬಡ್ಜೆಟ್‌ನಲ್ಲಿ ಅವಕಾಶವಿ

(ಶ್ರೀ ಮುಲ್ಕಾ ಗೋವಿಂದರೆಡ್ಡಿಯವರು).

ದೆಯೇ ವಿನಾ ಈಗಿರತಕ್ಕ ಒಂದು ಪದ್ಧತಿಯನ್ನು ಬದಲುಮಾಡುವುದಕ್ಕೆ ಯಾವ ರೀತಿಯ ಏರ್ಪಾಡಾಗಲಿ, ಯೋಚನೆ ಆಗಲಿ, ಪ್ಲಾನ್ ಆಗಲಿ ಇದರಲ್ಲಿ ಕಾಣುತ್ತಾ ಇಲ್ಲ. 5 ವರ್ಷದ ಯೋಜನೆ ಎಂಬುದಾಗಿ ಇಂಡಿಯಾದೇಶದಲ್ಲಿ ತಯಾರಾಗಿರತಕ್ಕ ಯೋಜನೆಯನ್ನೂ ನೋಡಿದರೂಕೂಡ ಇಂಡಸ್ಟ್ರೀಸ್‌ಗೆ ಮೂವತ್ತು ಕೋಟಿ ರೂಪಾಯಿ ಇಂಡಿಯಾ ಸರ್ಕಾರದವರು ಸಹಾಯ ಮಾಡಬೇಕೆಂದು ಇದ್ದಾರೆ. ಇದನ್ನೆಲ್ಲಾ ನೋಡಿದರೆ ದೊಡ್ಡದೊಡ್ಡ ಕಾರ್ಖಾನೆಗಳವರಿಗೆ ಮಾತ್ರ ಇಂಡಿಯಾ ಸರ್ಕಾರದವರಾಗಲಿ, ಮೈಸೂರು ಸರ್ಕಾರದವರಾಗಲಿ ಸಹಾಯಮಾಡುತ್ತಾರೆ ಎಂದು ಕಾಣುತ್ತದೆಯೇ ವಿನಾ ಚಿಕ್ಕ ಚಿಕ್ಕವರಿಗೆ ಯಾವರೀತಿಯ ಅನುಕೂಲವೂ ಒದಗುತ್ತಾ ಇಲ್ಲ.

ಟ್ಯಾಕ್ಸೇಷನ್ ಪಾಲಿಸಿ ತೆಗೆದುಕೊಂಡರೆ ಇದರಲ್ಲೂ ಸಹ ಯಾವ ಒಂದು ನೀತಿಯೂ ಕಾಣುವುದಿಲ್ಲ. ಅಪ್ರತ್ಯಕ್ಷವಾದ ತೆರಿಗೆ ಹಾಕಿ ಪ್ರತಿಯೊಬ್ಬರ ಮೇಲೂ ಹೊರೆ ಹೊರಿಸುತ್ತಾ ಇದ್ದೀರಿ. ನಮ್ಮ ದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತಂದಾಗ ಅದರಲ್ಲಿ ಕಡಮೆ ಬೀಳತಕ್ಕ ಉತ್ಪನ್ನವನ್ನು ಸರಿದೂಗಿಸುವುದಕ್ಕೆ ಸೇಲ್ಸ್ ಟ್ಯಾಕ್ಸ್ ಹಾಕಿದೆವು ಎಂದು ದೇಶಕ್ಕೆಲ್ಲಾ ಹೇಳಿದ್ದೀರಿ. ಐದು ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧ ಜಾರಿಯಲ್ಲಿದ್ದರೂ ಮೈಸೂರು ದೇಶದ 9 ಡಿಸ್ಟ್ರಿಕ್ಟ್‌ಗಳಲ್ಲಿ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಇದರಿಂದ ಪ್ರತಿಯೊಬ್ಬರ ಮೇಲೂ ಅಪ್ರತ್ಯಕ್ಷವಾಗಿ ತೆರಿಗೆ ಬಿದ್ದಿದೆ. ಅದರಲ್ಲೂ ಬಡ ಜನರ ಮೇಲೆ ಇದರ ಹೊರೆ ಜಾಸ್ತಿ ಆಗಿದೆಯೇ ವಿನಾ ದೊಡ್ಡವರ ಮೇಲೆ ಅಲ್ಲ. ಇದರ ಬದಲು ಸೇಲ್ಸ್ ಟ್ಯಾಕ್ಸ್ ವಜಾಮಾಡಿ. ಕಡ್ಡಾಯವಾಗಿ ತೆರಿಗೆ ಹಾಕಬೇಕಾದರೆ ದೊಡ್ಡವರ ಮೇಲೆ, ಡೆತ್‌ಡ್ಯೂಟಿ ಆಗಲಿ ಸೂಪರ್‌ಟ್ಯಾಕ್ಸ್ ಆಗಲಿ ಇನ್‌ಕಂಟ್ಯಾಕ್ಸ್ ಆಗಲಿ ಹಾಕಿ. ಆರೀತಿ ಹಾಕುವುದಕ್ಕೆ ಅವಕಾಶವಿಲ್ಲದಿದ್ದರೂ ಕೂಡ, ಕೇಂದ್ರ ಸರ್ಕಾರದವರೊಡನೆ ಒಪ್ಪಂದ ಮಾಡಿಕೊಂಡು ಅದರಲ್ಲಿ ಸ್ವಲ್ಪಭಾಗವನ್ನು ಪಡೆಯುವುದಕ್ಕೆ ಏರ್ಪಾಡು ಮಾಡುವುದು ನ್ಯಾಯವಾದದ್ದು. ಮದರಾಸು, ಬೊಂಬಾಯಿ ಸರ್ಕಾರದವರು ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಮಲ್ಟಿಪಾಯಿಂಟ್ ಟ್ಯಾಕ್ಸ್ ಇಟ್ಟುಕೊಂಡಿಲ್ಲ. ಅಲ್ಲಿ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಇಟ್ಟುಕೊಂಡಿದ್ದಾರೆ.

Sri H. SIDDAVEERAPPA (Minister for Home Affairs and Agriculture).—From what year there is single point Sales Tax in Madras ?

(SOME MEMBERS). –Not in Madras but in Bombay.

Sri Mulka GOVINDA REDDY.—If I am wrong, I will get myself corrected. Whatever may be existing in Madras or Bombay, it is not fair that you should have multi-point Sales Tax in Mysore. It is unfair that the consumer should be taxed and that the poor should pay more, whereas a rich man is not taxed to his capacity.

ಇನ್ನೂ ಸೇಲ್ಸ್ ಟ್ಯಾಕ್ಸ್ ಹೀಗೆಯೇ ಇದೆ. ಹೀಗೆಯೇ, ಬೇರೆ ಯಾವುದೊಂದು ವಿಷಯದಲ್ಲಿ ನೋಡಿದರೂ ಸರಿಯಾದ ನೀತಿ, ಕ್ರಮ ಯಾವುದೂ ಇಲ್ಲ. ಇನ್‌ಫ್ಲೇಷನ್ನನ್ನು ತಡೆಗಟ್ಟುವುದಕ್ಕೆ ಏನೋ ಒಂದು ಕಾರ್ಯಕ್ರಮವನ್ನು ಕೈಕೊಂಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ವಾಸ್ತವವಾಗಿ ಏನೂ ಮಾಡುತ್ತಿಲ್ಲ. ಇವರು ತಡೆಗಟ್ಟುತ್ತಿರುವ ರೀತಿಯೆಲ್ಲಾ ಬರೀ ತೇಪೇ ಹಾಕುವ ಕೆಲಸವಾಗುತ್ತದೆ. ನಿಜವಾಗಿ ಇನ್‌ಫ್ಲೇಷನ್ ತಡೆಗಟ್ಟಬೇಕಾದರೆ ಈಗಿರತಕ್ಕ ನಾಣ್ಯದ ಬೆಲೆಯನ್ನು ತಗ್ಗಿಸಬೇಕು, 10ರೂಪಾಯಿಯೆಂದಿರುವುದನ್ನು ಒಂದು ರೂಪಾಯಿಗೆ tender ಮಾಡುವಂತೆ ಮಾಡಿ ದೊಡ್ಡ ಇಂಡಸ್ಟ್ರಿಯಲಿಸ್ಟ್ ಮತ್ತು ಬಂಡವಾಳಸ್ಥರಲ್ಲಿರತಕ್ಕ ಹಣದ ಮಟ್ಟವನ್ನು ಕಡಮೆಮಾಡಿದರೆ ಆಗ ಇನ್‌ಫ್ಲೇಷನ್ ಹೋಗುತ್ತದೆಯೇ ವಿನಾ ಈ ರೀತಿಯಾಗಿ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಬಡಜನರ ಹೊಟ್ಟೆಯ ಮೇಲೆ ಹೊಡೆಯುವುದರಿಂದೇನೂ ಆಗುವುದಿಲ್ಲ. ಇದರ ಜೊತೆಗೆ ಇಂಡಿಯಾ ಸರ್ಕಾರದವರು ಡಿವ್ಯಾಲ್ಯುಏಟ್ ಮಾಡಿರುವುದರ ನೀತಿಯಿಂದ ನಮಗಿನ್ನಷ್ಟು ತೊಂದರೆಗೆ ಕಾರಣವಾಗಿದೆಯೆಂದು ಹೇಳಬಹುದು ಡಿವಾಲ್ಯುಯೇಟ್ ಮಾಡಿದ್ದರಿಂದ ನಮ್ಮ ದೇಶಕ್ಕೇನೂ ಪ್ರಯೋಜನವಿಲ್ಲ. ಎಂದು ನಾವು ಬ್ರಿಟಿಷ್ ಕಾಮನ್‌ವೆಲ್ತಿನವರ ಹಿಡಿತದಿಂದ ಪಾರಾಗುತ್ತೇವೋ ಅಂದು ನಾವು ಬದುಕಿಕೊಳ್ಳುತ್ತೇವೆ. ಆದ್ದರಿಂದ ತಾವು ಕೇಂದ್ರ ಸರ್ಕಾರದವರಿಗೆ ಈ ವಿಷಯವನ್ನು ಒತ್ತಾಯ ಮಾಡಿ ಕರೆನ್ಸಿ ವಿಷಯದಲ್ಲಿ ಸೂಕ್ತ ಕಾರ್ಯಕ್ರಮ ಕೈಕೊಳ್ಳುವಂತೆ ಮಾಡುತ್ತೀರೆಂದು ನಂಬಿದ್ದೇನೆ.

ಒಟ್ಟಿನಲ್ಲಿ ಈ ಬಡ್ಜೆಟ್ಟಿನಲ್ಲಿ ಆಶಾದಾಯಕವಾದದ್ದು ಮತ್ತು ಬಡಜನರ ಹಿತಸಾಧನೆಗೆ ಅನುಕೂಲವಾದದ್ದು ಯಾವುದೂ ಕಾಣುತ್ತಿಲ್ಲ. ಇಲ್ಲಿ ಕಾಣುತ್ತಿರುವುದೆಲ್ಲಾ ಸ್ಟೇಟಸ್‌ಕೋವನ್ನು ಮೇನ್‌ಟೇನ್ ಮಾಡುವುದಕ್ಕೆ ಮಾಡುತ್ತಿರುವುದೇ ಹೊರತು ಇನ್ನೇನೂ ಅಲ್ಲ. ಅರ್ಥಿಕ ಸಚಿವರು ತಮ್ಮ ಭಾಷಣದ ಉಪೋದ್ಘಾತದಲ್ಲಿ ಏನು ಹೇಳಿದ್ದಾರೆಯೋ ಅದರಂತೆ exploitation ತಪ್ಪಿಸುವುದಕ್ಕೆ ಯಾವ ಶ್ರಮವನ್ನೂ ಪಟ್ಟಿಲ್ಲವೆಂದು ನಾನು ದೃಢವಾಗಿ ಹೇಳುತ್ತೇನೆ. ಆದ್ದರಿಂದ ಇದು ಎಷ್ಟು ಮಾತ್ರವೂ ಬಡವನ ಬಡ್ಜೆಟ್ಟಲ್ಲವೆಂದುಹೇಳಿ ಎಲ್ಲರೂ ಇದನ್ನು ನಿರಾಕರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎನ್. ಬೋರಣ್ಣಗೌಡರು (ಬೇಲೂರು).—ಅಧ್ಯಕ್ಷರೇ, ನಮ್ಮ ಮಾನ್ಯ ಮಿತ್ರರಾದ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಈ ಬಡ್ಜೆಟ್ಟಿನ ವಿಚಾರವಾಗಿ ಮಾತನಾಡುತ್ತಾ ಅಸಂಬದ್ಧವಾದ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಕ್ಷಾಮ ನಿವಾರಣೆಗೆ ನಮ್ಮ ಸರ್ಕಾರದವರು ಯಾವ ಕೆಲಸವನ್ನೂ ತೃಪ್ತಿಕರವಾಗಿ ಕೈಕೊಂಡಿಲ್ಲವೆಂದು ಹೇಳಿದರು. ಕ್ಷಾಮವಿರತಕ್ಕ ಕಡೆ ಆಗಾಗ ಸಂಚಾರ ಮಾಡಿ ಸರ್ಕಾರದವರು ಯಾವ ಕಾರ್ಯವನ್ನು ಕೈಕೊಂಡಿದ್ದಾರೆ, ಯಾವುದನ್ನು ಮಾಡಿಲ್ಲ ಎಂದು ಪ್ರತ್ಯಕ್ಷವಾಗಿನೋಡಿ ಯಾವಾವ ಕೆಲಸಗಳನ್ನು ಕೈಕೊಳ್ಳಬೇಕಾಗಿತ್ತೆಂದು ಸರ್ಕಾರದವರ ಅವಗಾಹನೆಗೆ ತಂದಿದ್ದರೆ ನಿಜವಾಗಿಯೂ ಪರಿಣಾಮಕಾರಿಯಾಗುತ್ತಿತ್ತು. ಅದಿಲ್ಲದೆ ಸುಮ್ಮನೆ ಏನೂ ಕೈಕೊಂಡಿಲ್ಲವೆಂದು ಹೇಳುವುದು ಕೇವಲ ಅಸಂಬದ್ಧ ಪ್ರಲಾಪವೆಂದು ಹೇಳಬಯಸುತ್ತೇನೆ.

ಹಾಗೆಯೇ ಕೈಗಾರಿಕೆಗಳ ವಿಚಾರವಾಗಿ ಮಾತನಾಡುವಾಗ ಸಲಹಾರೂಪವಾಗಿ ಏನಾದರೂ ನಮ್ಮ ಮುಂದಿಡಬಹುದಾಗಿತ್ತು. ಯಾವ ಕೆಲಸಗಳನ್ನು ಮಾಡಬೇಕಾಗಿದೆ, ಯಾವ ಕೆಲಸವನ್ನು ಮಾಡುವುದರಿಂದ ನಮ್ಮ

ದೇಶ ಏಳಿಗೆಗೆ ಬರುತ್ತದೆ, ನಮ್ಮ ಕೈಗಾರಿಕೆಗಳು ಅಭಿವೃದ್ಧಿಗೆಬರಬಹುದೆಂದು ತಿಳಿಸಬಾರದಾಗಿತ್ತೆ? ಅದೇನೂ ಹೇಳದೆ ಸರ್ವೇಸಾಮಾನ್ಯವಾಗಿ ಏನೂ ಮಾಡಿಲ್ಲವೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಇನ್ನು ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ ಬಡ್ಜೆಟ್ಟಿನ ವಿಚಾರವಾಗಿ ಹೇಳುತ್ತಾ ಕೆಲವು ವಿಷಯಗಳನ್ನು ತಿಳಿಸಲು ಇಷ್ಟಪಡುತ್ತೇನೆ. ಈ ಸರ್ಕಾರದವರು ಮೊದಲು ಆಫೀಸಿಗೆ ಬಂದಕೂಡಲೇ ಜನರಿಗೆ ಚುನಾವಣಾ ಕಾಲದಲ್ಲಿ ಕಾಂಗ್ರೆಸ್ ಸರ್ಕಾರ ಯಾವ ಒಂದು ಭರವಸೆ, ಧೋರಣೆ ತೋರಿತ್ತೊ ಆ ಧೋರಣೆಯನ್ನು ಅಕ್ಷರಶಃ ಪಾಲಿಸಿದ್ದಾರೆ. ಕಂಟ್ರೋಲನ್ನು ತೆಗೆಯುತ್ತೇವೆ, ಕಂಟ್ರೊಲಿನಿಂದ ಜನರಿಗೆ ತೊಂದರೆಯಿದೆ, ಆ ತೊಂದರೆಯನ್ನು ನಿವಾರಣೆಮಾಡುವುದಕ್ಕೆ ಕೈಲಾದ ಪ್ರಯತ್ನವನ್ನೆಲ್ಲಾ ಮಾಡುತ್ತೇವೆಂದು ಹೇಳಿದಂತೆ ಕಂಟ್ರೋಲ್ ತೆಗೆದರು. ಅದರ ಪರಿಣಾಮವಾಗಿ ಎಲ್ಲರಿಗೂ ಯಾವ ಕಷ್ಟ ಪರಿಸ್ಥಿತಿ ಒದಗಬಹುದೆಂದು ನಿರೀಕ್ಷಿಸಿತ್ತೋ ಅದೇನೂ ಸಂಭವಿಸಲಿಲ್ಲ. ಸರ್ಕಾರದವರು ನಿಗದಿಮಾಡಿರುವ ರೂಪಾಯಿಗೆ $1\frac{1}{2}$ ಸೇರಿನ ಬೆಲೆಗಿಂತಲೂ ಆಗ್ಗವಾಗಿ ಇನ್ನೂ ಹೆಚ್ಚಿಗೆ ಆಹಾರ ಧಾನ್ಯಗಳು ಎಲ್ಲರಿಗೂ ದೊರೆಯುವಂತಾಗಿದೆ. ಬಹಳ ಜನರು ಡಿಪೋಗಳಲ್ಲಿ ಕೊಂಡುಕೊಳ್ಳುವುದೇ ತಪ್ಪಿ ಹೊರಗಡೆ ಮಾರಾಟಮಾಡುವ ಜನರಲ್ಲಿ ಕೊಂಡು ಕೊಂಡು ಸಂತೋಷಚಿತ್ತರಾಗಿದ್ದಾರೆ. ಅಲ್ಲದೆ ಕ್ಷಾಮ ಪೀಡಿತ ಪ್ರದೇಶಗಳಿಗೆ ಕೂಡ ಅಕ್ಕಿ ರಾಗಿ ಕಳುಹಿಸಿಕೊಡುತ್ತಿದ್ದಾರೆ. ಆಹಾರ ಪದಾರ್ಥಗಳ ಸರಬರಾಯಿಯ ವಿಚಾರದಲ್ಲಿ ಮತ್ತು ಈ ಹತೋಟಿಯನ್ನು ಸಡಿಲಿಸುವ ವಿಚಾರದಲ್ಲಿ ಎಷ್ಟು ಆಸಕ್ತಿ ವಹಿಸಬೇಕಾಗಿತ್ತೋ ಅಷ್ಟೂ ಆಸಕ್ತಿವಹಿಸಿ ಕೆಲಸ ಮಾಡಿದ್ದಾರೆ.

ಇನ್ನು ಇಂಜಿನಿಯರಿಂಗ್ ಇಲಾಖೆಯ ವಿಚಾರವಾಗಿ ಕೆಲವುಮಾತುಗಳನ್ನು ಹೇಳಬಯಸುತ್ತೇನೆ. ಈ explanatory memorandum ನಲ್ಲಿ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಕೆರೆಗಳನ್ನೂ ಮತ್ತು ನಾಲೆಗಳನ್ನೂ ತೆಗೆಯಿಸುವುದಕ್ಕೆ ಹಿಂದೆ ಹೆಚ್ಚಾಗಿ ಹಣವನ್ನು ಒದಗಿಸುತ್ತಿದ್ದರು. ಈ ಸಾರಿ ನೋಡಿದರೆ 24·4 ಲಕ್ಷರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ನಮ್ಮದೇಶದಲ್ಲಿ ಹೆಚ್ಚಿಗೆ ಧಾನ್ಯಗಳನ್ನು ಬೆಳೆಯಬೇಕು. ದೇಶಕ್ಕೆ ಹೆಚ್ಚಾಗಿ ಆಹಾರ ಒದಗಿಸಬೇಕೆಂಬ ಒಂದು ಪವಿತ್ರಯೋಜನೆಯನ್ನಿಟ್ಟು ಕೊಂಡಿರುವಾಗ ಈ ಮೈನರ್ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಮತ್ತು ಛಾನಲ್ ದುರಸ್ತಿಯ ಬಗ್ಗೆ ಇನ್ನೂ ಹೆಚ್ಚಿಗೆ ಮೊಬಲಗನ್ನು ಒದಗಿಸುವುದು ಅವಶ್ಯಕ ವಾಗಿತ್ತೆಂದು ನನಗೆ ತೋರುತ್ತದೆ. ಮಲೆನಾಡಿನಲ್ಲಿ ಅನೇಕ ಕೆರೆಗಳು ಹೂತುಹೋಗಿವೆ. ಆ ಪ್ರದೇಶದಲ್ಲಿ ಕೆರೆಗಳ ಕೆಳಗೆ 30—40 ಎಕರೆ ಸಾಗಿಗೆ ಅವಕಾಶವಿದ್ದರೂ ಹೂಳು ತುಂಬಿರುವುದರಿಂದ 2—3 ಎಕರೆಗಳು ಮಾತ್ರ ಸಾಗುವಳಿಯಾಗುತ್ತಾ ಬಾಕಿಯೆಲ್ಲಾ ಪಾಳು ಬಿದ್ದಿದೆ. ಇನ್ನು ಕೆಲವು ಕೆರೆಗಳಲ್ಲಿ ಅವುಗಳ ತೂಬುಗಳು ಸರಿಯಾಗಿಲ್ಲದೆ ನೀರೆಲ್ಲಾ ಹೋಗಿ ಸಕಾಲದಲ್ಲಿ ಮಳೆಬಂದರೂ ಕೆರೆಯಲ್ಲಿ ಹೆಚ್ಚಿಗೆ ನೀರು ನಿಲ್ಲದೆ ಹಾಕಿದ ಬೆಳೆಯು ಒಣಗಿಹೋಗಿರುವ ಸಂದರ್ಭಗಳೂ ಇವೆ. ಆದ್ದರಿಂದ ಜಾಗ್ರತೆ ಮೈನರ್‌ಕೆರೆಗಳ ಜೀರ್ಣೋದ್ಧಾರಕ್ಕೆ ಮತ್ತು ಚಾನಲ್‌ಗಳ ರಿಪೇರಿಗೆ ಆಸಕ್ತಿವಹಿಸಿ ಕೆಲಸ ಮಾಡಿದರೆ ಆಹಾರ ಪರಿಸ್ಥಿತಿಯನ್ನು ಹತೋಟಿಗೆ ತರುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರದವರಿಗೆ ಸಲಹೆ ನೀಡುತ್ತೇನೆ.

ಅರಣ್ಯ ಶಾಖೆಯಿಂದ ಇನ್ನೂ ಹೆಚ್ಚಿಗೆ ಸಂಪಾದನೆಯನ್ನು ಹೊಂದಬಹುದು. ಅದರ ಉತ್ಪನ್ನವನ್ನು ಜಾಸ್ತಿ ಮಾಡಿಕೊಳ್ಳಬಹುದೆಂಬುಕ್ಕೆ ನನ್ನದೊಂದು ಸಲಹೆ. ಸಾಧಾರಣವಾಗಿ ನಮ್ಮ ಕಾಡಿನಲ್ಲಿ ಹೇರಳವಾಗಿ ಟಿಂಬರ್ ಇದ್ದೂ ಕಳ್ಳರಿಗೆ ಆಸ್ಪದವಾಗಿ ಅನೇಕ ಕಡೆ ಟಿಂಬರ್ ಕಳ್ಳತನದಲ್ಲಿ ಸಾಗಿ ಹೋಗುತ್ತಿದ್ದು ಈ ಇಲಾಖೆಯ ಉತ್ಪತ್ತಿ ಕಡಮೆಯಾಗಿದೆ. ಇಲಾಖೆಯವರು ಆಸಕ್ತಿ ವಹಿಸಿ ಹೀಗೆ ಕಳ್ಳಸಾಗಾಣಿಕೆಯಾಗುವುದನ್ನು ಪತ್ತೆಹಚ್ಚುತ್ತಿಲ್ಲವೋ ಅಥವಾ ಅ ಕಳ್ಳತನ ಮಾಡಿರುವವರು ಸಿಕ್ಕುತ್ತಿಲ್ಲವೋ ಗೊತ್ತಿಲ್ಲ. ಏನೇ ಇದ್ದರೂ ಹಾಗೆ ಕದ್ದು ಮಾರುವವರಿಗೆ ಕಠಿಣ ಶಿಕ್ಷೆ ಮಾಡುವುದು ನಿಮ್ಮ ಕರ್ತವ್ಯವೆಂದು ಹೇಳುತ್ತೇನೆ.

ಅಲ್ಲದೆ ಈಗ ಸಾಧಾರಣವಾಗಿ ಸರ್ಕಾರದವರಿಗೆ ಗೊತ್ತಿರುವಂತೆ ಮರದಿಂದ ಬರತಕ್ಕ ಆದಾಯ ಬಹಳ ಕಡಮೆ. ಆದ್ದರಿಂದ ಕಾಡಿರತಕ್ಕ ಎಲ್ಲಾ ಕಡೆಯಲ್ಲೂ ಬಲಿತಿರುವ ಮರಗಳನ್ನು ಕಡಿಸಿ ಮಾರುವುದರಿಂದ ಹೆಚ್ಚಿಗೆ ಆದಾಯ ಬರುತ್ತದೆ. ಗಂಧದ ಮರಗಳವಿಷಯದಲ್ಲಿ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ, ಗಂಧದ ಎಣ್ಣೆಯನ್ನು ರಫ್ತುಮಾಡುವುದಕ್ಕಿಂತ ಹೆಚ್ಚಾಗಿ ಮರವನ್ನು ರಫ್ತುಮಾಡಿದರೆ ಹೆಚ್ಚಿಗೆ ಆದಾಯಬರುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಈ ಬಾಬಿನಿಂದ 6.78 ಲಕ್ಷ ರೂಪಾಯಿಗಳು ಮಾತ್ರ ಬರುತ್ತಿವೆ. ಇದನ್ನು ಇನ್ನೂ ಹೆಚ್ಚು ಮಾಡಿಕೊಳ್ಳಬಹುದೆಂದು ತೋರುತ್ತದೆ. ಹೇಗೆಂದರೆ ಪ್ರತಿಯೊಬ್ಬ ಫಾರೆಸ್ಟ್ ಕನ್ಸರ್ವೇಟರೂ ಮತ್ತು ಅಸಿಸ್ಟೆಂಟ್ ಕನ್‌ಸರ್ವೇಟರೂ ಹೆಚ್ಚು ಹೆಚ್ಚಿಗೆ ಈ ಗಂಧದ ಮರಗಳನ್ನು ಕೂಡಿಟ್ಟು ಹೊರಕ್ಕೆ ಕಳುಹಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ರೂರಲ್ ಡೆವಲಪ್‌ಮೆಂಟ್ ಬಾಬಿಗಾಗಿ ನಾವು 50 ಲಕ್ಷರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಈ ವಿಚಾರವಾಗಿ ಮಾತನಾಡಿದ ನನ್ನ ಮಾನ್ಯ ಮಿತ್ರರು ಕೆಲವರು ಇದರಿಂದೇನೂ ಪ್ರಯೋಜನವಿಲ್ಲವೆಂದೂ, ಇನ್ನೂ ಕೆಲವರು ತಕ್ಕಮಟ್ಟಿಗೆ ಪ್ರಯೋಜನ ಲಭಿಸಿದೆಯೆಂದೂ ಹೇಳಿದರು. ಅಂತೂ ಭಿನ್ನಾಭಿಪ್ರಾಯಕ್ಕೆ ಅವಕಾಶವಾಗಿದೆ. ಅದು ಹೇಗೆಯೇ ಇರಲಿ ಇದನ್ನು ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ವಹಿಸಿದರೆ ಸರಿಯಾಗಬಹುದು. ಇದೂ ಉಳಿತಾಯಕ್ಕೆ ಒಂದು ಅವಕಾಶವಾಗುತ್ತದೆಂದು ಹೇಳಿ, ಇನ್ನು ನೇಷನ್ ಬಿಲ್ಡಿಂಗ್ ಕಾರ್ಯಗಳಿಗೆ ಸಂಬಂಧಪಟ್ಟ ಇಲಾಖೆಗಳ ವಿಚಾರವಾಗಿ ಒಂದೆರಡು ಮಾತು ಹೇಳುತ್ತೇನೆ.

ಮೊದಲನೆಯದಾಗಿ ಮಿಡ್ಲ್‌ಸ್ಕೂಲು ವಿದ್ಯಾಭ್ಯಾಸ. ನಮ್ಮಲ್ಲಿನ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಬೇಕೆಂಬುದನ್ನು ನಾವೆಲ್ಲರೂ ಒಪ್ಪಿದ್ದೇವೆ. ಅದು ನ್ಯಾಯವೇ. ಆದರೆ ಬದಲಾವಣೆಯಾಗುವುದು ಹೇಗೆ, ಬದಲಾವಣೆಯಾಗುವುದಕ್ಕೆ ಯಾರು ಕಾರಣಕರ್ತರಾಗಬೇಕೆಂಬ ವಿಚಾರವನ್ನು ನಾವು ಸ್ವಲ್ಪ ಯೋಚನೆಮಾಡಬೇಕು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ಉಪಾಧ್ಯಾಯರುಗಳನ್ನು ನೇಮಿಸುವಾಗ ಸಾಮಾನ್ಯವಾಗಿ ತರಪೇತಾಗಿರುವವರನ್ನೇ ನೇಮಿಸಬೇಕಾದದ್ದು ಆವಶ್ಯಕ. ಏಕೆಂದರೆ ನಾವು ನೋಡಿರುವಂತೆ ಕೆಲವು ತರಗತಿಗಳಲ್ಲಿ ಉಪಾಧ್ಯಾಯರುಗಳಿಗಿಂತಲೂ ದೊಡ್ಡವರಾಗಿರುವವರು ವಿದ್ಯಾರ್ಥಿಗಳಾಗಿರುವುದೂ ಉಂಟು. ಅಂಥ ಸಂದರ್ಭಗಳಲ್ಲಿ ಕೇವಲ ಮೆಟ್ರಿಕ್ಯುಲೇಷನ್ ಪರೀಕ್ಷೆಮಾಡಿದ್ದಾನೆಂದು ಹೇಳಿ ಏನೂ ಅನುಭವವವಿಲ್ಲದ, ಟ್ರೈನಿಂಗ್ ಆಗದ ಉಪಾಧ್ಯಾಯರನ್ನು ನೇಮಿಸಿಬಿಟ್ಟರೆ ವಿದ್ಯಾಭ್ಯಾಸದ ಪ್ರಗತಿ ಎಷ್ಟರಮಟ್ಟಿಗಾದೀತು? ಅದರಿಂದೇನು ಅನಾಹುತವಾಗುತ್ತದೆಂಬುದನ್ನು ಯೋಚನೆಮಾಡಿ. ಆದ್ದರಿಂದ ಅಂಥವರುಗಳನ್ನು ನೇಮಿಸುವುದರಿಂದೇನೂ ಪ್ರಯೋಜನವಿಲ್ಲ. ಹಾಗೆಯೇ, ಕೆಲವು ತಾಲ್ಲೂಕ

(ಶ್ರೀ ಬಿ. ಎಸ್. ಬೋರಣ್ಣಗೌಡರು).

ಹೆಡ್‌ಕ್ವಾರ್ಟರುಗಳಲ್ಲಿ ಮಿಡ್ಲ್ ಸ್ಕೂಲ್ ಹೆಡ್‌ಮಾಸ್ಟರಾಗಿ ಗ್ರಾಜುಯೇಟ್‌ಗಳೇ ಇರಬೇಕೆಂದು, ಏನೂ ಅನುಭವವಿಲ್ಲದವನನ್ನು ಬಿ.ಎ. ಪಾಸುಮಾಡಿದ ಕ್ಷಣಕ್ಕೇ ತಂದು 25–30 ವರ್ಷದ ಅನುಭವವಿರುವ ಇತರ ಉಪಾಧ್ಯಾಯರುಗಳಮೇಲೆ ಹೆಡ್‌ಮಾಸ್ಟರಾಗಿ ಹಾಕಿರುತ್ತಾರೆ. 25–30 ವರ್ಷ ಪೂರ್ಣ ಅನುಭವ ಪಡೆದು ಟ್ರೈನಿಂಗ್ ಆಗಿರತಕ್ಕ ಉಪಾಧ್ಯಾಯರುಗಳು ಹೆಡ್‌ಮಾಸ್ಟರ್‌ಸ್ಥಾನಕ್ಕೆ ಅನರ್ಹರೆಂದು ಹೇಳಿ, ಏನೂ ಅನುಭವವಿಲ್ಲದವನನ್ನು ಬಿ.ಎ. ಮಾಡಿದನೆಂದಾಕ್ಷಣಕ್ಕೆ ನೇಮಿಸಿದರೆ ಅದರ ಪರಿಣಾಮವೇನಾಗುತ್ತದೆಂಬದನ್ನು ಹೇಳಬೇಕಾಗಿಲ್ಲ. ಇದು ಸರಿಯಲ್ಲ. ಡಿಪಾರ್ಟ್‌ಮೆಂಟಿಗೆ ಸೇರಿ ಚೆನ್ನಾಗಿ ಅನುಭವ ಪಡೆದು ಇಲಾಖಾ ಅಧಿಕಾರಿಗಳು ಪಾಠ ಹೇಳಿಕೊಡುವುದರಲ್ಲಿ ಆತ ದಕ್ಷನೆಂದು ಹೇಳಿದ ಮೇಲೆ ಆತನನ್ನು ಹೆಡ್‌ಮಾಸ್ಟರಾಗ ಇಟ್ಟುಕೊಳ್ಳುವುದನ್ನು ಬಿಟ್ಟು, ಅವರುಗಳನ್ನು ಅಸಿಸ್ಟೆಂಟ್ ಮಾಸ್ಟರಾಗಿಯೇ ಕೂರಿಸಿ ಅವರಿಗೆ ಒಂದು ಅವಕಾಶವನ್ನು ಕೊಡದೆ ಇರುವುದು ಎಂಥ ನೀತಿ ಎಂಬುದನ್ನು ಆಲೋಚನೆಮಾಡಬೇಕು.

4 P.M.

ಇದರಿಂದ ಅಭಿವೃದ್ಧಿಯಾಗುವುದಕ್ಕೆ ಬದಲಾಗಿ ಇನ್ನೂ ಕ್ಷೀಣವಾಗುತ್ತದೆಯೆಂದು ಹೇಳಬೇಕಾಗುತ್ತದೆ. ಒಂದು ಜಿಲ್ಲೆಯಲ್ಲಿ ಒಂದು ರೀತಿ, ಇನ್ನೊಂದು ಜಿಲ್ಲೆಯಲ್ಲಿ ಇನ್ನೊಂದು ರೀತಿ ಮಾಡುತ್ತಾರೆ. ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿರುವ ಸ್ಕೂಲುಗಳಿಗೆ ಗ್ರ್ಯಾಜುಯೇಟ್ ಆಗಿರಬೇಕೆಂದು ಹೇಳುತ್ತಾರೆ, ಇನ್ನೊಂದುಕಡೆ ಬೇರೆಯವರನ್ನು ನೇಮಿಸುತ್ತಾರೆ. ಯಾರು ಲಾಯಖಾಗಿರುತ್ತಾರೋ ಅಂಥವರನ್ನು ಉಪಾಧ್ಯಾಯರಾಗಿ ನಿಯಮಿಸಬೇಕು. ಅವರಲ್ಲಿರುವ ನೀತಿ ಮತ್ತು ಒಳ್ಳೆಯ ನಡತೆಗಳು ಮಕ್ಕಳಲ್ಲಿ ಒಳ್ಳೆಯ ಪರಿಣಾಮವನ್ನುಂಟುಮಾಡುತ್ತವೆ. ಹೇಗೂ ಸಂಬಳ ಬರುತ್ತದೆ, ಹೇಗಿದ್ದರೇನು ಎಂಬ ಮನೋಭಾವವುಳ್ಳ ಒಳ್ಳೆಯ ನಡತೆ ನೀತಿ ಇಲ್ಲದವರನ್ನು ನೇಮಿಸುವುದಕ್ಕೆ ಬದಲು ಒಳ್ಳೆಯ ಶಕ್ತರನ್ನೂ ನೀತಿವಂತರನ್ನೂ ನೇಮಿಸಿದರೆ ಆಗ ಸರಿಹೋಗುತ್ತದೆ.

ಇನ್ನೊಂದು ವಿಷಯವನ್ನು ಕೆಲವು ಮಹನೀಯರು ಹೇಳಿದರು. ಪ್ರತಿಯೊಂದು ಹೈಸ್ಕೂಲಿನಲ್ಲಿಯೂ ವ್ಯವಸಾಯವನ್ನು ಬೋಧಿಸುವ ಕ್ರಮವನ್ನು ಜಾರಿಗೆ ತರಬೇಕೆಂದು ಹೇಳಿದರು. ಇದು ಒಳ್ಳೆಯದು. ಬೇಸಿಕ್ ಎಜ್ಯುಕೇಷನ್, ಎಂದರೆ, ಮೂಲ ಶಿಕ್ಷಣದ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಬೇಕು, ಇದನ್ನು ಒತ್ತಾಯವಾಗಿ ಕೊಡಬೇಕು, ಈ ಮೂಲ ಶಿಕ್ಷಣಕ್ಕೆ ಪ್ರೋತ್ಸಾಹ ಕೊಡದೇಹೋದರೆ ನಮ್ಮ ಜನಾಂಗದಲ್ಲಿ ಅವರ ಕಾಲಮೇಲೆ ಅವರು ನಿಂತು ಅವರ ಜೀವನವನ್ನು ಅವರು ಮಾಡಿಕೊಂಡು ಪರಾವಲಂಬನೆಯಿಲ್ಲದೆ ಸತ್ಪ್ರಜೆಗಳಾಗುವುದಕ್ಕೆ ಅವಕಾಶವಿಲ್ಲದೇ ಹೋಗುತ್ತದೆ. ಆದುದರಿಂದ ಈ ಮೂಲ ಶಿಕ್ಷಣ ಪದ್ಧತಿಯನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ).–ಅಧ್ಯಕ್ಷರೆ, ಸಂಸ್ಥಾನದ ಹಣಕಾಸಿನ ಬಗ್ಗೆ ಮಾಡಿದ ಭಾಷಣದಲ್ಲಿ ಮುಖ್ಯ ಮಂತ್ರಿಗಳು

"The previous Finance Minister presented what is called the Interim Budget for 1952-53 on 21st March 1952, nearly three months back. He showed a revenue deficit of Rs. 83·95 lakhs, besides the prospect of a huge deficit of over three crores of rupees by reason of the Central Government stopping payment of food subsidy. The present Ministry took office in the face of these deficits unknown in the history of the State."

ಎಂದು ಹೇಳುತ್ತಾರೆ. ಮಹಾರಾಜರು.

"I am quite confident that you will discharge that responsibility with wisdom, ability and integrity."

ಎಂದು ನಮಗೆ (ಸಭೆಯ ಸದಸ್ಯರಿಗೆ) ಹೇಳುತ್ತಾರೆ. ಅಲ್ಲದೆ ಮುಖ್ಯ ಮಂತ್ರಿಗಳೂ ಕೂಡ ನಮ್ಮ ಮುಂದೆ ಬಡ್ಜೆಟ್ಟನ್ನಿಡುವಾಗ

"I need your sympathy, co-operation and counsel and I beseech you to give them to me in a generous measure."

ಎಂಬುದಾಗಿ ನಮಗೆ ಹೇಳುತ್ತಾರೆ. ಈ ಮೂರನ್ನೂ ಮನಸ್ಸಿನಲ್ಲಿಟ್ಟುಕೊಂಡು, ನಾನು ಈ ಬಡ್ಜೆಟ್ಟನ್ನು ಯಾವ ರೀತಿ ಟೀಕೆಮಾಡಬೇಕೋ, ಎಲ್ಲಿ ಹೊಗಳಬೇಕೋ ಅಲ್ಲಿ ಹೊಗಳುತ್ತೇನೆ; ಎಲ್ಲಿ ತಪ್ಪುಮಾಡಿದ್ದಾರೋ ಅಷ್ಟು ತಪ್ಪು ಎಂದು ಹೇಳುತ್ತೇನೆ. ಈ ನೀತಿಯನ್ನು ಕಳೆದ ಹದಿನೈದು ವರ್ಷಗಳಿಂದ ನಾನು ಅನುಸರಿಸಿಕೊಂಡು ಬರುತ್ತಿದ್ದೇನೆ. ಇದಕ್ಕಾಗಿಯೇ ಒಬ್ಬ ಶಂಕರಲಿಂಗೇಗೌಡ ಮಾತನಾಡಿದರೆ ಅದೊಂದು ಗಂಭೀರ ಭಾಷಣ ಎಂದು ಜನಗಳು ಹೇಳುತ್ತಾರೆ. ಆದುದರಿಂದ ಈ ವತ್ತು ಕೂಡ ನಾನು ಮನಃಪೂರ್ವಕವಾಗಿ ಈ ಬಡ್ಜೆಟ್ಟನ್ನು ವಿವರಣೆಮಾಡುತ್ತೇನೆ. ನನಗೆ ಯಾವಾಗಲೂ ಹಿಂದಿನ ಅಧ್ಯಕ್ಷರುಗಳು ಒಂದು ಗಂಟೆ ಕಾಲವನ್ನು ಕೊಡುತ್ತಿದ್ದರು. ಈಗಲೂ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ 40 ನಿಮಿಷ ಅವಕಾಶ ಕೊಟ್ಟಿದ್ದೀರಿ, ಹಾಗೆ ಬೋರಣ್ಣಗೌಡರಿಗೆ ಕೊಟ್ಟಿರಿ.

Mr. SPEAKER.—I gave Sri Boranna Gowda only 16 minutes.

Sri L. SIDDAPPA.–But he represents a party by himself.

Sri M. SHANKARALINGE GOWDA –Yes, I am very glad that the Opposition Party supports me Sir. (laughter) I will begin. ಕಾಂಗ್ರೆಸ್ ಮಂತ್ರಿಗಳು 1947ನೆ ಇಸವಿಯ ಅಕ್ಟೋಬರ್ ತಿಂಗಳು ಸರ್ವಜಿತುನಾಮ ಸಂವತ್ಸರದ ವಿಜಯದಶಮಿ ದಿವಸ ಅಧಿಕಾರವನ್ನು ವಹಿಸಿಕೊಂಡರು. ಅವರು ಅಧಿಕಾರವನ್ನು ತೆಗೆದುಕೊಂಡ ಕಾಲದಲ್ಲಿ ಜನರಲ್ ಇನ್‌ವೆಸ್ಟ್‌ಮೆಂಟಿನಲ್ಲಿ 20 ಕೋಟಿ ರೂಪಾಯಿ ಇತ್ತು ; ಸ್ಪೆಷಲ್ ರಿಜರ್ವ್‌ನಲ್ಲಿ 8 ಕೋಟಿ ರೂಪಾಯಿ ಇತ್ತು. ಒಟ್ಟು 29 ಕೋಟಿ ರೂಪಾಯಿಗಳು ಇದ್ದವು. ಇದನ್ನು ಯಾವ ರೀತಿ ಖರ್ಚು ಮಾಡಿದರು ಎಂಬುದನ್ನು ಮೊದಲು ನಾವು ತಿಳಿದುಕೊಳ್ಳಬೇಕು. ವಿದ್ಯುಚ್ಛಕ್ತಿಗೆ 866 ಲಕ್ಷ ಚಿಲ್ಲರೆ ರೂಪಾಯಿ ಹಾಕಿದರು. ಕೈಗಾರಿಕೆ ಮತ್ತು ರೋಡ್‌ಟ್ರಾನ್ಸ್‌ಪೋರ್ಟ್‌ಗೆ 488 ಲಕ್ಷ ರೂಪಾ

ಯಿ ಹಾಕಿದರು. ಇವರ ಕಾಲದಲ್ಲಿ ನೀರಾವರಿಗೆ ಮಾತ್ರ 274 ಲಕ್ಷ ರೂಪಾಯಿ ಹಾಕಿದರು ಒಟ್ಟಿನಲ್ಲಿ 1628 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರು. ಇನ್ನೇನುಮಾಡಿದರೆ ದರೆ, ಅಡ್ಮಿನಿಸ್ಟ್ರೇಷನ್ ಖರ್ಚನ್ನು ಹೆಚ್ಚಿಸಿಕೊಂಡು ಬಂದರು. 1947–48ನೆಯ ಸಾಲಿನಲ್ಲಿದ್ದ ಮಟ್ಟ ಈ ರೀತಿ ಇತ್ತು:—ಜನರಲ್ ಅಡ್ಮಿನಿಸ್ಟ್ರೇಷನ್, ನ್ಯಾಯಾಂಗ, ಪೋಲೀಸ್, ಜೈಲು, ವೈದ್ಯಸಹಾಯ, ವಿದ್ಯಾಇಲಾಖೆ, ಜನಾರೋಗ್ಯ—ಇಷ್ಟು ಇಲಾಖೆಗಳಿಗೆ 328 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರು. ಇದನ್ನು ಹೆಚ್ಚಿಸಿಕೊಳ್ಳಬೇಕೆಂದು 1948-49ರಲ್ಲಿ 532 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರು. ಎಂದರೆ, ಏಕ್‌ದಮ್ 204 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದರು. ಹೀಗೆ ಹೆಚ್ಚಿಸಿದಾಗ ಆ ಹಣವನ್ನು ರಿಜರ್ವ್ ಫಂಡಿನಿಂದ ತೆಗೆದುಕೊಂಡು ಖರ್ಚು ಮಾಡಿದರು. 1949–50ರ 9 ತಿಂಗಳಲ್ಲಿ 415 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರು. 1947–48ನೆಯ ಸಾಲಿನ ಖರ್ಚಿಗಿಂತ 87 ಲಕ್ಷ ರೂಪಾಯಿ ಜಾಸ್ತಿ ಖರ್ಚುಮಾಡಿದರು. ಇದನ್ನೂ ರಿಜರ್ವ್ ಫಂಡಿನಿಂದ ತೆಗೆದುಕೊಂಡರು. 1950–51ರಲ್ಲಿ ಖರ್ಚನ್ನು 550 ಲಕ್ಷ ರೂಪಾಯಿಗೆ ಏರಿಸಿದರು, ಎಂದರೆ 222 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಹೆಚ್ಚಾಗಿ ಖರ್ಚುಮಾಡಿದರು. ಇದನ್ನೂ ಕೂಡ ರಿಜರ್ವ್ ಫಂಡಿನಿಂದ ತೆಗೆದರು. 1951-52ನೆಯ ರಿವೈಸ್ಡ್ ಬಡ್ಜೆಟ್ಟಿನಲ್ಲಿ 615 ಲಕ್ಷ ರೂಪಾಯಿಗಳಿಗೆ ಏರಿಸಿದರು. ಇದರಿಂದ 286 ಲಕ್ಷ ರೂಪಾಯಿ ಹೆಚ್ಚಾಯಿತು. ಇವನ್ನೆಲ್ಲಾ ಸೇರಿಸಿದರೆ, 8 ಕೋಟಿ ರೂಪಾಯಿಗಳನ್ನು ರಿಸರ್ವ್ ಫಂಡಿನಿಂದ ತೆಗೆದರು. ವಿದ್ಯುಚ್ಛಕ್ತಿ, ಕೈಗಾರಿಕೆ, ನೀರಾವರಿ ಕಾಮಗಾರಿ, ವಿದ್ಯಾಭ್ಯಾಸ, ವೈದ್ಯಸಹಾಯ, ಜನಾರೋಗ್ಯ, ಜೈಲುಗಳು ಜನರಲ್ ಅಡ್ಮಿನಿಸ್ಟ್ರೇಷನ್ ಇದಕ್ಕೆಲ್ಲಾ 24 ಕೋಟಿ ರೂಪಾಯಿಗಳು ಖರ್ಚಾಗಿಹೋಯಿತು.

ಮೊನ್ನೆ ಕೆಲವರು ಮಾತನಾಡುವಾಗ 20 ಕೋಟಿ ರೂಪಾಯಿಗಳು ಹಾಳಾಗಿ ಹೋದವು ಎಂದು ಹೇಳುತ್ತಿದ್ದರು. ಇಷ್ಟನ್ನು ಮಾತ್ರ ನಾನು ಕೇಳಿದೆ. ಆದರೆ ನಾನು ಹೇಳುವುದು ನಿಜವಾಗಿಯೂ 24 ಕೋಟಿ ರೂಪಾಯಿಗಳು ಹೋಗಿದೆ ಎಂದು. ಇದೂ ಅಲ್ಲದೆ ದೇಶದಲ್ಲಿ ದುಡಿಯುತ್ತಿದ್ದ, ಆದಾಯ ತೆರಿಗೆ, ರೈಲ್ವೆ ಇತ್ಯಾದಿ ಅನೇಕ ಬಾಬುಗಳು ಕೇಂದ್ರ ಸರ್ಕಾರಕ್ಕೆ ಸೇರಿಹೋದವು. ಅಬ್ಕಾರಿ ಬಾಬಿನ ಉತ್ಪತ್ತಿಯು ಈ ವರ್ಷ ಕಡಮೆಯಾಗಿ ಹೋಯಿತು. ವಿದ್ಯುಚ್ಛಕ್ತಿಗೆ 866 ಲಕ್ಷ, ಕೈಗಾರಿಕೆಗೆ (ರೋಡ್ ಟ್ರಾನ್ಸ್‌ಪೋರ್ಟ್ ಸೇರಿ) ನಾವು ಖರ್ಚುಮಾಡಿರುವುದು 488 ಲಕ್ಷ. ಆದರೆ ನಮಗೆ ಇದರಿಂದ ಏನು ಭಾಗ್ಯ ಬಂದಹಾಗಾಯಿತು ಎಂಬುದನ್ನು ನಾವು ನೋಡಬೇಕು.

The net income from electricity and industries in 1947–48 was Rs. 85·28 lakhs. The previous Congress Ministry further invested a sum of Rs. $13\frac{1}{2}$ crores towards the capital works, up to the end of March 1952. Now the net income of electricity and industries will be Rs. 104 lakhs. This is not a budget with the thin binding of the previous Congress Ministry. Now it is very thick. According to the budget of 1952—53 of the previous ministry, the net income is increased by Rs. 19 lakhs on a further capital of Rs. $13\frac{1}{2}$ crores. Now if the same amount had been invested on irrigation :—

ಅದೇ ಹಣವನ್ನು ವ್ಯವಸಾಯಾಭಿವೃದ್ಧಿಗೆ ಉಪಯೋಗ ಮಾಡಿದ್ದಲ್ಲಿ ಈ ದಿವಸ ಸುಮಾರು $2\frac{1}{2}$ ಲಕ್ಷ ಎಕರೆ ಖುಷ್ಕಿ ಜಮೀನು ನೀರಾವರಿಯಾಗಿ ಉಳುಮೆ ಮಾಡಲು ಅನುಕೂಲವಾಗಿ, ಈ ದಿವಸ ನಾವು ಹೆಚ್ಚು ಆಹಾರವನ್ನು ಉತ್ಪತ್ತಿಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ಅನ್ನದ ಅಭಾವ ನಮಗೆ ಇಂದು ಇರುತ್ತಿರಲಿಲ್ಲ. ಇವರ ಜೊತೆಗೆ 40 ಲಕ್ಷ ರೂಪಾಯಿಗಳು ಕಂದಾಯದ ರೂಪವಾಗಿ ವಸೂಲಾಗುತ್ತಿತ್ತು ಮತ್ತು ಅಕ್ಕಿಗಾಗಿ ನಾವು ತೆರುತ್ತಿರುವ 5 ಕೋಟಿ ರೂಪಾಯಿಗಳ ಉಳಿತಾಯ ಬೇರೆ ಆಗುತ್ತಿತ್ತು. ಹಿಂದಿನ ಸರ್ಕಾರದವರು ಹಾಗೆ ಮಾಡಿದ್ದರೆ ನಮಗೆ ಇಂದು 5 ಕೋಟಿ ರೂಪಾಯಿಗಳ ಅಕ್ಕಿ ಇಲ್ಲೇ ದೊರೆಯುತ್ತಿತ್ತು. ನಮ್ಮ ರೈತರಿಂದಲೇ ನೀವು 5 ಕೋಟಿ ರೂಪಾಯಿಗಳನ್ನು ಕೊಟ್ಟು ಅಕ್ಕಿಯನ್ನು ಕೊಂಡಿದ್ದರೆ, ಈ ದಿವಸ ರೈತನಾಗಿರತಕ್ಕವನು ತನ್ನ ಹೆಂಡತಿಗೊಂದು ಅರಳೇ ಪೇಟೆ ಸೀರೆ ತಂದು ಉಡಿಸುತ್ತಿದ್ದನು.

ಹಾಗೆ ಅವನು ಅರಳೇಪೇಟೆ ಶೀರೆ ಕೊಂಡಿದ್ದರೆ, ನಮಗೆ ಆತನಿಂದ ಟ್ಯಾಕ್ಸ್ ರೂಪದಲ್ಲಿ ಖಜಾನೆಗೆ ಹಣ ಬರುತ್ತಿತ್ತು. ಆದರೆ ಈ ದಿವಸ ರೈತನ ಕೈಲಿ ದುಡ್ಡಿಲ್ಲದಿರುವಾಗ ನಿಮಗೆ ಟ್ಯಾಕ್ಸನ್ನು ಹೇಗೆ ಕೊಡುತ್ತಾನೆ? ನೀರಾವರಿ ಕಾಮಗಾರಿಗಳು ಚೆನ್ನಾಗಿ ನಡೆದಿದ್ದರೆ ರೈತನಿಂದ ಸರ್ಕಾರಕ್ಕೆ ಇಂಡೈರೆಕ್ಟಾಗಿ ಟ್ಯಾಕ್ಸ್ ಬರುತ್ತಿತ್ತು. ಆದರೆ ಈಗ ಆತನಿಂದ ನಿಮಗೆ ಬರಿ ಒಂದು ಡೈರೆಕ್ಟ್ ಟ್ಯಾಕ್ಸ್ ಮಾತ್ರ ಬರುತ್ತಿದೆ. ಆ 24 ಕೋಟಿ ರೂಪಾಯಿಗಳು ಈ ದಿವಸ ನಮ್ಮಲ್ಲಿದ್ದಿದ್ದರೆ ನಮ್ಮ ಇಂದಿನ ಅರ್ಥಿಕ ಸಚಿವರು (ಮುಖ್ಯಮಂತ್ರಿಗಳು) ಇಂದು 30 ಕೋಟಿ ರೂಪಾಯಿಗಳ ಸಾಲವನ್ನಾದರೂ ಸುಲಭವಾಗಿ ಎತ್ತಬಹುದಾಗಿತ್ತು. ಸರ್ಕಾರಕ್ಕೆ ದುಡ್ಡು ಬೇಕಾಗಿರುತ್ತೆಂದು ಹೇಳಿದ್ದರೆ ಅದು ಒಂದು ನಿಮಿಷದಲ್ಲೇ ಭರ್ತಿಯಾಗುತ್ತಿತ್ತು. ನನ್ನ ಮನೆಯಲ್ಲಿ ದುಡ್ಡನ್ನಿಟ್ಟುಕೊಂಡು ಅಂಗಡಿಗೆ ಹೋಗಿ 50 ರೂಪಾಯಿಗಳ ಸಾಲ ಕೇಳಿದರೆ, ಅಂಗಡಿಯವನು ಯಾವ ಅನುಮಾನವೂ ಇಲ್ಲದೆ ಸಾಲ ಕೊಡುತ್ತಿದ್ದ. ಇದೆಲ್ಲಾ ಒಂದು ಥಳುಕು. ಅದರಂತೆ ಸರ್ಕಾರ ಯಾವಾಗ ತನ್ನಲ್ಲಿ ದುಡ್ಡಿಲ್ಲವೆಂದು ಸಾಲಕ್ಕೆ ಹೊರಡುತ್ತದೆಯೋ ಆಗ ಅದಕ್ಕೆ ಸಾಲ ಸಿಕ್ಕುವುದೂ ಕೊಂಚ ಕಷ್ಟವೆ. ನಮ್ಮ ಭಂಡಾರದಲ್ಲಿ ಈ ದಿವಸ ಆ ದುಡ್ಡು ಇದ್ದಿದ್ದರೆ, ಆ ಕೈಗಾರಿಕೆಗಳಿಂದ ನಮಗೆ ಲಾಭ ಬರುತ್ತಿದ್ದುದು ನಿಂತರೂ ಚಿಂತೆಯಿರಲಿಲ್ಲ, ನಮಗೆ ಬಡ್ಡಿಯಾದರೂ ಬರುತ್ತಿತ್ತೆಂಬುದಕ್ಕೆ ಯಾವ ಅನುಮಾನವೂ ಇರಲಿಲ್ಲ. ಆದರೆ ನಮಗೆ ಈಗ ಅತ್ತಲಾಗಿ ಬರತಕ್ಕ ಲಾಭವೂ ಹೋಗಿ, ಇತ್ತ ಬಡ್ಡಿ ಸಹ ಇಲ್ಲದಂತಾಗಿದೆ. ಆದರೆ ಹಿಂದೆ ಇದ್ದಂಥ ಮಂತ್ರಿಗಳ ಪೈಕಿ ಇಲ್ಲಿ ಯಾರೊಬ್ಬರೂ ಈಗ ಇಲ್ಲ. ಆದರೆ ನಮ್ಮ ಅಧ್ಯಕ್ಷರು (Speaker) ಮಾತ್ರ ಇರುವುದರಿಂದ ಇದರ ಬಿಸಿ ಕೊಂಚ ಅವರಿಗೂ ತಟ್ಟೀತೋ ಏನೋ ಎಂಬ ಒಂದು ಅನುಮಾನವಿದೆ. ಆದರೆ ಹೀಗೆ ಹಿಂದೆ ಇದ್ದ ಮಂತ್ರಿಮಂಡಲದವರು ಆ ದುಡ್ಡನ್ನೆಲ್ಲಾ ನೀರಾವರಿ (ಇರಿಗೇಷನ್) ಬಾಬಿಗೆ ಉಪಯೋಗಿಸದೆ, ಅದನ್ನು ಕೈಗಾರಿಕಾ ಬಾಬುಗಳ ಮೇಲೆ ಹಾಕಿರತಕ್ಕದ್ದು ಒಂದೇ ಒಂದು ಅವರ ತಪ್ಪು. ಇನ್ನೂ ಏನಾದರೂ ತಪ್ಪುಗಳಿದ್ದಾವೇನೋ ಎಂದು ನಾನು ಲೆಕ್ಕಗಳನ್ನೆಲ್ಲಾ ಕೆಳಗೆ ಮೇಲೆ ತಿರುವಿತಿರುವಿ ಹಾಕಿ ನೋಡಿದ್ದೇನೆ. ಆದರೆ ಅಂಥಾದ್ದೇನೂ ಇಲ್ಲ.

(SRI M. SHANKARALINGEGOWDA).

ಆದರೆ ಕೆಲಕೆಲವು ವಿಚಾರಗಳನ್ನು ನಮ್ಮ ಈಗಿನ ಪ್ರಧಾನ ಸಚಿವರು ಮೊನ್ನೆ ಬಡ್ಜೆಟ್ ಮಂಡಿಸಿದ ಕಾಲದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಅದೆಲ್ಲಾ ಇಂಗ್ಲೀಷ್‌ನಲ್ಲೇ ಇದೆ. ಕನ್ನಡಕ್ಕೆ ತರ್ಜುಮೆ ಮಾಡಿಸಿ ಪ್ರತಿಗಳನ್ನೊದಗಿಸಿದ್ದರೆ ಬಹಳ ಚೆನ್ನಾಗಿತ್ತು. ಆದರೆ ಈ ಬಡ್ಜೆಟ್ಟನ್ನು ತಯಾರಿಸಿರತಕ್ಕ ಇಬ್ಬರೂ ಅರ್ಥಶಾಸ್ತ್ರಾಭ್ಯಾಸ ಮಾಡಿದ ವಿದ್ಯಾರ್ಥಿಗಳೆಂದು ಕಂಡು ಬರುತ್ತಿಲ್ಲ. ಅಥವಾ ಅದನ್ನು ಅವರು ಅಭ್ಯಾಸ ಮಾಡಿದ್ದರೂ, ಆ ಪರೀಕ್ಷೆಯಲ್ಲಿ ಅವರು ಹೇಗೆ ಉತ್ತೀರ್ಣರಾದರೋ ನನಗೆ ತಿಳಿಯದು. ನಿವ್ವಳ ಆದಾಯ (Net income) ಹಾಕತಕ್ಕ ಕಡೆ ಅವರೇಕೆ ಒಟ್ಟು ಆದಾಯ (Gross income) ಹಾಕಿದರೋ ಅದು ನನಗೆ ಗೊತ್ತಾಗುವುದಿಲ್ಲ. 577 ಲಕ್ಷ ಕೈಗಾರಿಕೆ ಒಟ್ಟು ಆದಾಯದಲ್ಲಿ 545 ಲಕ್ಷ ಖರ್ಚು ಹೋದರೆ ಇನ್ನು ಳಿಯುವುದೆಲ್ಲಾ 12 ಲಕ್ಷ ಮಾತ್ರ. $13\frac{1}{2}$ ಕೋಟಿ ರೂಪಾಯಿಗಳ ಬಂಡವಾಳ ಹಾಕಿರತಕ್ಕ ಕೈಗಾರಿಕೆಗಳಿಂದ ಕೇವಲ 12 ಲಕ್ಷ ಉತ್ಪತ್ತಿ ಬಂದಿತೆಂದರೆ ಅದು ಅಷ್ಟು ತೃಪ್ತಿಕರವಾಗಿ ಕಾಣುವುದಿಲ್ಲವೆಂಬ ಒಂದು ಭಯದಿಂದಲೋ ಏನೋ ಹೀಗೆ ಮಾಡಿರಬೇಕು.

Sri K. HANUMANTHAIYA.—It is done according to the pattern of accounting newly introduced under the Constitution.

ಶ್ರೀ ಎಂ. ಶಂಕರಲಿಂಗೇಗೌಡರು.—ಹಾಗಾದರೆ ಆ ಕಾನ್ಸ್ಟಿಟ್ಯೂಷನ್ ಬರೆದವರೇನು ಬೃಹಸ್ಪತಿಗಳೋ? ಹಾಗಿದ್ದ ಪಕ್ಷದಲ್ಲಿ ಎಲೆಕ್ಟ್ರಿಸಿಟಿಯ, ಸರ್ಕಾರಿ ಬಸ್ ಇಲಾಖೆಯ ಮತ್ತು ನೀರಾವರಿ ಬಾಬುಗಳಿಂದ ಬರತಕ್ಕ ಒಟ್ಟು 296 ಲಕ್ಷ ರೂಪಾಯಿಗಳ ಆದಾಯವನ್ನು ಸೇರಿಸಿಕೊಳ್ಳಬೇಕಾಗಿತ್ತು. ಹಾಗೆ ಮಾಡದೆ 111 ಲಕ್ಷ ರೂಪಾಯಿಗಳನ್ನು ಮಾತ್ರ ಸೇರಿಸಿರುತ್ತಾರೆ. ಒಂದು ಕಡೆ ಗ್ರಾಸ್ ಇನ್‌ಕಂ (ಒಟ್ಟು ಆದಾಯ) ತೋರಿಸಿರುತ್ತಾರೆ : ಮತ್ತೊಂದು ಕಡೆ ನಿವ್ವಳ ಆದಾಯ ತೋರಿಸಿರುತ್ತಾರೆ. ಮುಖ್ಯವಾಗಿ ದೇಶದಲ್ಲಿ 20 ಕೋಟಿ ಆದಾಯಬರುತ್ತಿದೆಯೆಂದು ತೋರಿಸಿದ್ದಾರೆ. ಆದರೆ ನಿಜವಾಗಿ ದೇಶದಲ್ಲಿ ಬರತಕ್ಕ ಉತ್ಪತ್ತಿ ಹತ್ತೂ ಮುಕ್ಕಾಲು ಕೋಟಿ ರೂಪಾಯಿಗಳು ಮಾತ್ರ. ಆದರೆ ಈಗಿನ ಮಂತ್ರಿಮಂಡಲವೇ ಹೀನಾದೃಷ್ಟವಾದದ್ದು. ಕಾರಣವಾದರೂ ಇಷ್ಟೆ—ಇವರ ಕಾಲದಲ್ಲಿ ಅನೇಕಕಡೆ ಕ್ಷಾಮಡಾಮರಗಳುಂಟಾದವು. ಬರುತ್ತಿದ್ದ ಉತ್ಪತ್ತಿ ಬಾಬುಗಳೆಲ್ಲಾ ಕೈತಪ್ಪಿ ಹೋದವು, ಆ ಬಾಬುಗಳಿಂದ ನಮಗೆ ಸುಮಾರು 51 ಲಕ್ಷ ರೂಪಾಯಿಗಳು ಹೋದವು, ಲ್ಯಾಂಡ್ ರೆವಿನ್ಯೂ ಕಡಮೆ ಆಯಿತು : ಫಾರೆಸ್ಟ್ ಬಾಬಿನಲ್ಲೂ ಆದಾಯ ಕಡಮೆ ಬಂತು. ಅಬ್ಕಾರಿ ಬಾಬು ಕಡಮೆಯಾಯಿತು. ಒಟ್ಟಿನಲ್ಲಿ 51 ಲಕ್ಷ ರೂಪಾಯಿಗಳವರೆಗೆ ಉತ್ಪತ್ತಿ ಖೋತಾ ಆಯಿತು. ಈ ಖೋತಾ ಬಾಬು ಬಾರದೆ ಹೋಗಿದ್ದ ಪಕ್ಷದಲ್ಲಿ ಈಗಿನ ಮಂತ್ರಿಮಂಡಲದ ಬಡ್ಜೆಟ್ ಇಪ್ಪತ್ತೂವರೆ ಕೋಟಿ ರೂಪಾಯಿಗಳ ಬಡ್ಜೆಟ್ ಆಗಿರುತ್ತಿತ್ತು. ಆದರೆ ಅವರಿಗೆ ಅದೃಷ್ಟವಿಲ್ಲ. ದೇಶದಲ್ಲಿ ಕ್ಷಾಮತಲೆದೋರಿತು. ಅನೇಕ ಕಡೆ ಕಂದಾಯಗಳ ರಿಮಿಷನ್ ಕೊಟ್ಟರು. ಕ್ಷಾಮನಿವಾರಣೆಗಾಗಿ ವಿಶೇಷ ಹಣವನ್ನು ಖರ್ಚು ಮಾಡಿದರು. ಹೀಗೆಲ್ಲಾ ಆದುದರಿಂದ ಅವರಿಗೆ ಉತ್ಪತ್ತಿ ಬಂದರೂ ಹಣವು ಖರ್ಚಾಗಿ ಹೋಯಿತು. ಹೀಗೆ ಅವರಿಗೆ 51 ಲಕ್ಷ ರೂಪಾಯಿಗಳು ಕಡಮೆ ಬಿದ್ದಿದ್ದಾಗ್ಯೂ, ಹಿಂದಿನ ಮಂತ್ರಿಮಂಡಲದವರಿಗಿಂತ 53 ಲಕ್ಷ ರೂಪಾಯಿಗಳನ್ನು ದೇಶದ ಅಭಿವೃದ್ಧಿಕಾರ್ಯಗಳಿಗೆ ಈಗಿನ ಮಂತ್ರಿಮಂಡಲದವರು ಖರ್ಚುಮಾಡುತ್ತಾರೆ. ಆದುದರಿಂದ ಇವರನ್ನು ಧೈರ್ಯಶಾಲಿಗಳೆಂದೇ ಹೇಳಬೇಕು. ಬಡ್ಜೆಟ್ಟಿನಲ್ಲಿ ಏನಾದರೂ ಹೆಚ್ಚು ಕಡಮೆ ಮಾಡಿದ್ದಾರೇನೋ ಎಂದು ಪರೀಕ್ಷೆ ಮಾಡಿದೆ. ಆದರೆ ಅಂಥಾದ್ದೇನೂ ಕಂಡುಬರಲಿಲ್ಲ. ಆದುದರಿಂದ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈಗಿನ ಮಂತ್ರಿಮಂಡಲದವರು ಹಿಂದಿನ ಮಂತ್ರಿಮಂಡಲದವರಿಗಿಂತಲೂ ವಿದ್ಯಾಭ್ಯಾಸಕ್ಕೆ $7\frac{1}{2}$ ಲಕ್ಷ ರೂಪಾಯಿಗಳು, ಇರಿಗೇಷನ್ ಬಾಬಿಗೆ 10 ಲಕ್ಷ ರೂಪಾಯಿಗಳು, ಇತರ ಕಾಮಗಾರಿಗಳಿಗೆ $8\frac{3}{4}$ ಲಕ್ಷ ರೂಪಾಯಿಗಳು, ಅಭಿವೃದ್ಧಿಕಾರ್ಯಗಳಿಗೆ 15 ಲಕ್ಷ ರೂಪಾಯಿಗಳು, ಕ್ಷಾಮನಿವಾರಣೆಗೆ $12\frac{1}{2}$ ಲಕ್ಷ ರೂಪಾಯಿಗಳು ಜಾಸ್ತಿ ಕೊಟ್ಟಿದ್ದಾರೆ.

ಈಗಿನ ಮಂತ್ರಿಮಂಡಲದವರು 51 ಲಕ್ಷ ರೂಪಾಯಿಗಳ ಉತ್ಪತ್ತಿಯನ್ನು ಕಳೆದುಕೊಂಡು ಹಿಂದಿನ ಮಂತ್ರಿಗಳಿಗಿಂತ 53 ಲಕ್ಷ 79 ಸಾವಿರ ರೂಪಾಯಿಗಳನ್ನು ಅಭಿವೃದ್ಧಿ ಇಲಾಖೆಗಳಿಗೆ ಜಾಸ್ತಿಕೊಟ್ಟಿರುವುದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ವಿದ್ಯಾಭ್ಯಾಸಕ್ಕಾಗಿ 165 ಲಕ್ಷ ರೂಪಾಯಿಗಳಿದ್ದ ದರ್ಜೆಯನ್ನು (standard) ಈಗಿನ ಮಂತ್ರಿಗಳು 338 ಲಕ್ಷ ರೂಪಾಯಿಗಳಿಗೆ ತಂದಿರುತ್ತಾರೆ. ಆದರೆ ಇಂಥ ಕ್ಷಾಮಕಾಲದಲ್ಲಿ ಅದಕ್ಕೇಕೆ ಅಷ್ಟು ಮುತುವರ್ಜಿ ವಹಿಸಬೇಕಾಗಿತ್ತು? ನೀರಾವರಿ ಕೆಲಸಗಳಿಗೆ ಹಣವಿಲ್ಲ. ಅಂಥಾದ್ದರಲ್ಲಿ ಇಷ್ಟೇಕೆ ವಿದ್ಯಾಭ್ಯಾಸಕ್ಕೆ ಕೊಡಬೇಕಾಗಿತ್ತು ! ಇಷ್ಟು ಅಡ್ಜಸ್ಟ್ ಮಾಡಬಹುದಾಗಿತ್ತು. ವಯಸ್ಕರ ವಿದ್ಯಾಭ್ಯಾಸ ಪದ್ಧತಿಯಿಂದ ಏನೂ ಪ್ರಯೋಜನವಿಲ್ಲ. ಸೂಪರ್‌ವೈಸರುಗಳು ಸ್ಲೇಟು ಬುಕ್ಕು ಸೀಮೆ ಎಣ್ಣೆ ಮಾರಿಕೊಂಡು ದುಡ್ಡು ಸಂಪಾದಿಸುತ್ತಾ ಇದ್ದಾರೆ. ಇದಕ್ಕೆ ಹೆಚ್ಚು ಒದಗಿಸುವ ಬದಲು ನೀರಾವರಿ ಕಾಮಗಾರಿಗೆ ಕೊಟ್ಟಿದ್ದರೆ ಬಹಳ ಸಂತೋಷವಾಗುತ್ತಿತ್ತು; ಕ್ಷಾಮವೂ ಬರುತ್ತಿರಲಿಲ್ಲ. ಬಡ್ಜೆಟ್ ತಯಾರು ಮಾಡಲು ಒಂದು ರೀತಿನೀತಿ ಆಧಾರ ಇರಬೇಕೆಂದು ಇಷ್ಟನ್ನು ಹೇಳುತ್ತಿದ್ದೇನೆ. ನಮ್ಮ ದೇಶಕ್ಕೆ 50 ಲಕ್ಷವನ್ನು ರಿಸರ್ವಾಗಿಡಬೇಕೆಂದು ಒಂದು ತತ್ವ ಇರಬೇಕು. ಇನ್ನೊಂದು ತತ್ವ ನಾವು ಸಾಲಿಯಾನ ಕೊಡಬೇಕಾದ ಸಾಲದ ಬಡ್ಡಿಗೆ ನೂರು ಲಕ್ಷ ರೂಪಾಯಿಗಳನ್ನು ಇಟ್ಟಿರಬೇಕು. ಸ್ಪೆಷಲ್ ನೀರಾವರಿ ಕಾಮಗಾರಿಗಳಿಗೆ ನೂರು ಲಕ್ಷ ರೂಪಾಯಿಗಳನ್ನಿಡಬೇಕು. ಒಟ್ಟು 250 ಲಕ್ಷ ರೂಪಾಯಿಗಳ ಬಡ್ಜೆಟ್ಟನ್ನಿಟ್ಟು ಮಿಕ್ಕದ್ದನ್ನು ಯಾವಾವ ಇಲಾಖೆಗೆ ಎಷ್ಟು ಕೊಡಬೇಕೆಂದು ಯೋಚನೆ ಮಾಡಿ ಮುಂದುವರಿಯಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಅನೇಕ ದೇಶಗಳ ಬಡ್ಜೆಟ್ಟನ್ನು ನಾನು ನೋಡಿದ್ದೇನೆ. ಮೈಸೂರು ದೇಶದ ಉತ್ಪತ್ತಿಯಲ್ಲಿ ತೆರಿಗೆಯಿಂದ ಎಷ್ಟು ವಸೂಲಾಗುತ್ತದೆ ಮತ್ತು ತೆರಿಗೆಯಿಲ್ಲದೆ ಎಷ್ಟು ವಸೂಲಾಗುತ್ತದೆ ಎಂಬುದನ್ನು ನೋಡಬೇಕು. ಮೈಸೂರು ದೇಶದ ಉತ್ಪತ್ತಿಯಲ್ಲಿ ಶೇಕಡ 63 ಭಾಗ ತೆರಿಗೆಯಿಲ್ಲದ ಬಾಬುಗಳಿಂದಲೂ ಇನ್ನುಳಿದ 37 ಭಾಗ ತೆರಿಗೆಯಿಂದಲೂ ವಸೂಲಾಗುತ್ತದೆ ಎಂಬುದನ್ನು ನಾನು ಲೆಕ್ಕ ಹಾಕಿದ್ದೇನೆ. ತೆರಿಗೆಯಲ್ಲಿ ಅಪ್ರತ್ಯಕ್ಷ (ಇನ್‌ಡೈರೆಕ್ಟ್) ಮತ್ತು ಪ್ರತ್ಯಕ್ಷ (ಡೈರೆಕ್ಟ್) ಎಂದು ಎರಡು ವಿಧ ಇದೆ. ಅಪ್ರತ್ಯಕ್ಷವಾಗಿ ಶೇಕಡ $9\frac{1}{2}$ ಯಷ್ಟು ಜಮಾನು ಕಂದಾಯದಿಂದ ಬರುತ್ತದೆ. By direct taxation ಅಂದರೆ ನೇರವಾದ ತೆರಿಗೆಯಿಂದ ಶೇಕಡ $27\frac{1}{2}$ ಬರುತ್ತದೆ. ಈಗ

ಮದ್ರಾಸು ಬಡ್ಜೆಟ್ ತೆಗೆದುಕೊಳ್ಳಿ, ಬೊಂಬಾಯಿ ಬಡ್ಜೆಟ್ ತೆಗೆದುಕೊಳ್ಳಿ, ಇತರ ತಿರುವಾಂಕೂರು ಮೊದಲಾದ ದೇಶಗಳ ಬಡ್ಜೆಟ್ ತೆಗೆದುಕೊಳ್ಳಿ. ಹೀಗೆ ಹೆಚ್ಚು ತೆರಿಗೆಯಿಲ್ಲದೇ ಇರುವ ಸಂಸ್ಥಾನದ ಬಡ್ಜೆಟ್ ಮೈಸೂರಿನದೊಂದೇ.

ಮುಖ್ಯವಾಗಿ ಈಗಿನ ಮಂತ್ರಿಗಳು ಆಡಳಿತದಲ್ಲಿ 30 ಲಕ್ಷ ರೂಪಾಯಿಗಳನ್ನು ಕಡಮೆ ಮಾಡಿದ್ದಾರೆ. ಇನ್ನೂ ಮಾಡಬೇಕಾಗಿದೆ. I have already submitted a note on Village Administration to the Chief Minister and the President of the Mysore Cabinet and I think it is under the consideration of the Cabinet. ಈಗ ನನ್ನ ಅಭಿಪ್ರಾಯವನ್ನು ಸೂಚಿಸುತ್ತೇನೆ. ಈಗ ದೇಶದಲ್ಲಿ 17 ಸಾವಿರ ಗ್ರಾಮಗಳು, ಅವಕ್ಕೆ ಫಿರ್ಕ ಆರು ಸಾವಿರ, 729 ರೆವೆನ್ಯೂ ಇನ್ಸ್‌ಪೆಕ್ಟರುಗಳು—ಅದರಲ್ಲಿ 329 ಜನರನ್ನು ತೆಗೆದಿದ್ದಾರೆ—72 ತಾಲ್ಲೂಕುಗಳು, 21 ಸಬ್‌ಡಿವಿಜನ್‌ಗಳು ಮತ್ತು 9 ಜಿಲ್ಲೆಗಳು ಇವೆ. ನಾನೂ ಬಹಳ ಯೋಚನೆ ಮಾಡಿ ಅವರು ಬಡ್ಜೆಟ್‌ಮಾಡಿರುವ ಹಾಗೆ ಗುಣಾಕಾರ ಹಾಕಿ ದೇಶವನ್ನು 1,500 ಫಿರ್ಕಾರಗಳು, 200 ರೆವೆನ್ಯೂ ಸರ್ಕಲ್ಲುಗಳು. 48 ತಾಲ್ಲೂಕುಗಳು ಮತ್ತು ಸಬ್‌ಡಿವಿಜನ್ ಎನ್ನುವುದನ್ನು ಮತ್ತು ಜಿಲ್ಲೆಗಳನ್ನೂ ಸೇರಿಸಿ ಬೇರೆ 12 ಜಿಲ್ಲೆಗಳು ಮತ್ತು ಅದರ ಮೇಲೆ ಮೂರು ಡಿವಿಜನ್ ಎಂದು ಮಾಡಿದ್ದೇನೆ. I am referring to the practice in Bombay. Whether it is called a Division or not, after all, it is a District; but this is a Sub-District. ಈಗ ನನ್ನ ಲೆಕ್ಕದ ಪ್ರಕಾರ ಈಗಿರುವ ಸಂಬಳವಲ್ಲದೆ ಪ್ರತಿಯೊಬ್ಬ ಅಮಲ್ದಾರರಿಗೂ ತಿಂಗಳಿಗೆ 200 ರೂಪಾಯಿಗಳ ಅಲೋಯನ್ಸ್ ಕೊಡಬಹುದು. ಪ್ರತಿಯೊಬ್ಬ ಅಸಿಸ್ಟೆಂಟ್ ಕಮಿಷನರಿಗೂ ತಿಂಗಳಿಗೆ 325 ರೂಪಾಯಿಗಳನ್ನು ಮತ್ತು ಡೆಪ್ಯುಟಿ ಕಮೀಷನರ್‌ಗಳಿಗೆ ತಿಂಗಳಿಗೆ 400 ರೂಪಾಯಿಗಳನ್ನೂ ಕೊಡಬಹುದು. ಅಲ್ಲದೆ ಗುಮಾಸ್ತರಿಗೂ ಮತ್ತು ಜವಾನರಿಗೂ ಹೆಚ್ಚು ಹೆಚ್ಚಾಗಿ ಅಲೋಯನ್ಸ್ ಕೊಟ್ಟರೂ ನನ್ನ ಯೋಜನೆ ಪ್ರಕಾರ $8\frac{1}{2}$ ಲಕ್ಷ ರೂಪಾಯಿಗಳನ್ನು ಉಳಿಸಿದ್ದೇನೆ. ಈ $7\frac{1}{2}$ ಲಕ್ಷರೂಪಾಯಿಗಳನ್ನು ನಾನು ಕಾಣಿಸಿರುವ ಗುಮಾಸ್ತರಿಗೆ ಮತ್ತು ಜವಾನರಿಗೆ ಮತ್ತು ಇತರ ಸಿಬ್ಬಂದಿಗೆ ತಿಂಗಳಿಗೆ ಹತ್ತು ರೂಪಾಯಿಗಳಂತೆ ತುಟ್ಟಿಭತ್ಯವಾಗಿ ಕೊಡಬಹುದು. ಆ ತರಹ ಯೋಜನೆ ಹಾಕಿಕೊಟ್ಟಿದ್ದೇನೆ. ಅದರಂತೆ ಅಸೆಂಬ್ಲಿ ಸದಸ್ಯರುಗಳು ಪ್ರತಿಯೊಂದು ಇಲಾಖೆಯಲ್ಲೂ ಈ ರೀತಿ ಗುಣಿಸಿ ಲೆಕ್ಕಾಚಾರಮಾಡಿದ್ದಾರೆಯೆ ? The Chief Minister stated to the Non-Gazetted Officers who demanded the enhancement of Dearness Allowance "Prepare a Budget, and I shall see what I can do." ಅದು ಹೇಗಾದರೂ ಇರಲಿ. ನಾನು ಮುಖ್ಯಮಂತ್ರಿಗಳಿಗೆ ಒಂದು ಗ್ರಾಮ, ತಾಲ್ಲೂಕು ಮತ್ತು ಡಿಸ್ಟ್ರಿಕ್ಟಿನ ಆಡಳಿತದ ಬಡ್ಜೆಟ್ಟನ್ನು ಸ್ವತಃ ತಯಾರಿಸಿ ಕೊಟ್ಟಿದ್ದೇನೆ. ಅದರಂತೆ ಎಲ್ಲರೂ ಒಂದು ಬಡ್ಜೆಟ್ ಕೊಡಬೇಕು. ಇನ್ನೇನೂ ಬೇಕಾಗಿಲ್ಲ.

Mr. SPEAKER.—The Hon'ble Member has exceeded his time.

ಶ್ರೀ ಎಂ. ಶಂಕರಲಿಂಗೇಗೌಡರು.—Only one minute and I will sit down. ನಾನು ಕಳುಹಿಸಿರುವ ಡಾಕ್ಯುಮೆಂಟ್ ಅಂದರೆ "Note on Village Administration" is an official document. ಈಗ ನಾನು $7\frac{1}{2}$ ಲಕ್ಷ ರೂಪಾಯಿಗಳನ್ನು ಉಳಿಸಿರುವ ಯೋಜನೆಯನ್ನು ನಮ್ಮ ಸರ್ಕಾರದವರು ಗುಣಿಸಿ ನೋಡಿ ತಪ್ಪಾಗಿದೆಯೆಂದು ಹೇಳಿದರೆ ಬೇಕಾದರೆ ನಾನು ಬಂದು ಅದಕ್ಕೆ ಸಮಾಧಾನ ಹೇಳುತ್ತೇನೆ.

Sri B. NARAYANASWAMY.—On a point of order, Sir. Can a Member speak of a document which is not before the House ? He refers to a document which he has handed over to the Chief Minister. We do not know anything about it. It is not before the House.

Mr. SPEAKER.—There is no point of order.

4-30 P. M.

ಶ್ರೀ ಎಂ. ಶಂಕರಲಿಂಗೇಗೌಡರು.—ಬಹಳ ಸಂತೋಷ, ಹೊಸ ಮಂತ್ರಿಗಳಲ್ಲಿ ಬಹಳ ಗಾಂಭೀರ್ಯವನ್ನು ಮೂರು ತಿಂಗಳಿನಿಂದ ನೋಡಿದ್ದೇನೆ. ಮಂತ್ರಿಗಳಲ್ಲೂ ಗಾಂಭೀರ್ಯವಿದೆ. ಪ್ರತಿಯೊಬ್ಬರೂ ಅಗಾಂಭೀರ್ಯದಿಂದ ವರ್ತಿಸಿದ್ದೀರಿ ಎಂದು ಹೇಳುತ್ತೇನೆ. ನನ್ನ ಸಿ.ಐ.ಡಿ. ಕೆಲಸ ಇದೇ, ಯಾರಾದರೂ ಗಾಂಭೀರ್ಯ ಬಿಟ್ಟಿದ್ದಾರೆಯೇ, ಇಲ್ಲವೇ ಉಳಿಸಿಕೊಂಡಿದ್ದಾರೆಯೇ ಎಂಬುದನ್ನು ನೋಡುತ್ತಲೇ ಇರುತ್ತೇನೆ. ತಾವು ಹೀಗೆ ವರ್ತಿಸುತ್ತಿರುವುದು ನನಗೆ ಬಹಳ ಸಂತೋಷ. ಇದೇ ಟ್ರೆಂಡ್ ಇಟ್ಟುಕೊಂಡು ಹೋದರೆ ಬಹಳ ಒಳ್ಳೆಯದು. ಕಾಂಗ್ರೆಸ್ ಆಗಲಿ, ನಾನ್‌ಕಾಂಗ್ರೆಸ್ಸಾಗಲಿ ಎಲ್ಲರೂ ಒಂದೇ ಎಂಬ ಭಾವನೆಯನ್ನು ಮಂತ್ರಿಗಳು ಇಟ್ಟುಕೊಂಡಿದ್ದಾರೆ. ಮಂತ್ರಿಗಳೇನಾದರೂ ಮಿಕ್ಸ್‌ಚರ್ ಆದರೆ ಬೆಲೆ ಕಡಮೆ ಆಗಿ ಹೋಗುತ್ತದೆ. ವ್ಯಾಪಾರಕ್ಕೆ ಒಂದು ಸಂತೆಯಲ್ಲಿ 50 ಕುರಿಗಳು ಇರುತ್ತವೆ ಎಂದು ಇಟ್ಟುಕೊಳ್ಳಿ..............

(The Member was cautioned by the Speaker). (ಸಭೆಯಲ್ಲಿ ನಗು). ಹಾಗಾದರೆ ಅಲ್ಲಿಗೇ ಬಿಡುತ್ತೇನೆ. ಈ ಬಡ್ಜೆಟ್‌ನ್ನು I have read sentence by sentence, page by page. ನಾವುಗಳೆಲ್ಲರೂ ಇದಕ್ಕೆ ಸಲಹೆಗಾರರು. ನಾವೆಲ್ಲರೂ ಸೇರಿ ಒಂದು ಯೋಜನೆ ಕೊಟ್ಟರೆ ಒಂದು ನೂರು ಲಕ್ಷ ರೂಪಾಯಿ ಖೋತಾ ಮಾಡಬಹುದು. ಇಂಡಿಯಾ ಸರ್ಕಾರದವರು ಕೊಟ್ಟ ಹಾಗೆ ಮೈಸೂರು ಸರ್ಕಾರದವರು ತುಟ್ಟಿಭತ್ಯ ಕೊಡಬಹುದು. ಪ್ರತಿನಿತ್ಯ ರಾತ್ರಿ, ಹಗಲು, ಎಣ್ಣೆ ಹಾಕಿ ದೀಪ ಉರಿಸಿಕೊಂಡು ಕೆಲಸಮಾಡಿರತಕ್ಕ ಫೈನಾನ್ಷಿಯಲ್ ಸೆಕ್ರೆಟರಿಯವರಿಗೂ, ಅವರ ಸಹಾಯದಿಂದ ಈ ಬಡ್ಜೆಟ್ಟನ್ನು ತಯಾರಿಸಿರತಕ್ಕ ಹೊಸ ಮಂತ್ರಿಗಳಿಗೂ ವಂದಿಸುತ್ತೇನೆ. ಇದೇ ತರಹ ಬಡ್ಜೆಟ್ಟನ್ನು ಹಾಕಿಕೊಂಡು ಹೋದ ಪಕ್ಷದಲ್ಲಿ "We will see Sri K. Hanumanthaiya to be one of the Prime Ministers of India." (Laughter.) ಅವರಲ್ಲಿ ಬಹಳ ಸ್ಮರಣೆ ಇದೆ, ಒಳ್ಳೆಯ ಗುಣವಿದೆ. ವಿರೋಧ ಪಕ್ಷದವರಿಗೆ ಉತ್ತರ ಕೊಡಬೇಕೆಂದರೆ "Well Sir" ಎಂದು ಮಾತನಾಡಿ ಸಮಾಧಾನ ಮಾಡುತ್ತಾರೆ. ಇದಕ್ಕಾಗಿ ಅವರು ನನಗಿಂತ ಚಿಕ್ಕವರಾದ್ದರಿಂದ ಅವರಿಗೆ ಆಶೀರ್ವಾದವನ್ನು ಮಾಡುತ್ತೇನೆ. ಕೊನೆಯದಾಗಿ

(ಶ್ರೀ ಎಂ. ಶಂಕರಲಿಂಗೇಗೌಡರು.)

ನನ್ನ ಬಡ್ಜೆಟ್ ಭಾಷಣ ಮುಗಿಸುವುದಕ್ಕೆ ಮುಂಚೆ ಜಾತಿಯಲ್ಲಿ ಗುರುಗಳಾದ ಅಧ್ಯಕ್ಷ ಸಿದ್ದಯ್ಯನವರ ಆಶೀರ್ವಾದವನ್ನು ಬೇಡುತ್ತೇನೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿಯವರು (ಚಿಂತಾಮಣಿ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಖ್ಯ ಮಂತ್ರಿವರ್ಯರು ನಮ್ಮ ಎದುರಿನಲ್ಲಿಟ್ಟಿರತಕ್ಕ ಈ ಬಡ್ಜೆಟ್ ನಾನು ಆಶಿಸಿದ್ದಷ್ಟು ಆಶಾದಾಯಕವಾಗಿಲ್ಲ. ಈ ಬಡ್ಜೆಟ್ಟು ಬಹಳ ಭಾರಿ ಖೋತಾ ಬಡ್ಜೆಟ್ ಆಗ ಬೇಕಾಗಿದ್ದರೂ ಅದನ್ನು ಕೇವಲ 1⅛ ಕೋಟಿ ರೂಪಾಯಿಗಳಷ್ಟಕ್ಕೆ ಇಳಿಸಿ, ಸರಿದೂಗಿಸಿರುವುದು ಬಹಳ ಶ್ಲಾಘನೀಯವಾದದ್ದು. ಆದರೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕ್ಷಾಮದ ದೆಸೆಯಿಂದ ಜನಗಳು ಮತ್ತು ದನಗಳು ನಾನಾ ರೀತಿಯಿಂದ ಕಷ್ಟವನ್ನು ಅನುಭವಿಸುತ್ತಾ ಇರುವುದು ನಮ್ಮ ಘನ ಸರ್ಕಾರಕ್ಕೂ ಮತ್ತು ನಮ್ಮ ಮಹಾರಾಜರವರಿಗೂ ಅಲ್ಲದೆ ಇಂಡಿಯಾದೇಶದ ಪ್ರಧಾನ ಮಂತ್ರಿಗಳಿಗೂ ಕೂಡ ಗೊತ್ತಾಗಿ ಈ ಕ್ಷಾಮದಲ್ಲಿ ಕಷ್ಟಪಡತಕ್ಕಂಥ ಅನೇಕ ಜನಗಳ ಪರಿಹಾರಕ್ಕಾಗಿ ಅವರೂ ಸಹ ಇದುವರೆಗೆ 50 ಸಾವಿರ ರೂಪಾಯಿಗಳನ್ನು ನಮ್ಮ ಮೈಸೂರು ದೇಶಕ್ಕೆ ಕಳುಹಿಸಿಕೊಟ್ಟಿರುವುದು ಬಹಳ ಸಂತೋಷದ ವಿಷಯ. ಅದೇ ರೀತಿ ನಮ್ಮ ಮಹಾರಾಜರವರೂ ಕೂಡ 30 ಸಾವಿರ ರೂಪಾಯಿಗಳನ್ನು ಈ ಕ್ಷಾಮದಿಂದ ಕಷ್ಟಪಡತಕ್ಕವರ ಪರಿಹಾರಕ್ಕೆ ಕೊಟ್ಟಿರುವುದು ಬಹಳ ಸಂತೋಷಪಡತಕ್ಕ ವಿಷಯ. ಈಗ ತಯಾರು ಮಾಡಿರತಕ್ಕ ಬಡ್ಜೆಟ್ ಅಂದಾಜಿನಲ್ಲಿ ಈ ರೀತಿ ಕಷ್ಟಪರಿಸ್ಥಿತಿಯುಂಟಾಗಿರತಕ್ಕ ಕೋಲಾರ ಮತ್ತು ಇತರ ಕ್ಷಾಮದ ಡಿಸ್ಟ್ರಿಕ್ಟುಗಳ ವಿಚಾರದಲ್ಲ ವಿಶೇಷ ತರಹವಾದ ಖಾಯಂ ಆಗಿ ಪರಿಹಾರಕೊಡತಕ್ಕ ಒಂದು ಅಂದಾಜನ್ನು ತೋರಿಸಿಲ್ಲ. ಆದ್ದರಿಂದ ಅದನ್ನು ಮನವಿಮಾಡಿಕೊಳ್ಳುವ ಉದ್ದೇಶದಿಂದ ನಾನು ಸ್ವಲ್ಪಮಾತನಾಡಬೇಕಾಗಿದೆ. ನಮ್ಮ ಕೋಲಾರ ಡಿಸ್ಟ್ರಿಕ್ಟು ಯಾವಾಗ ನೋಡಿದರೂ, ಮಳೆಯ ಅಂಕಿಅಂಶಗಳಿಂದ ನೋಡಿದರೆ, ಒಂದು ವರ್ಷಕ್ಕೆ ಸರಾಸರಿ 14 ಇಂಚು ಮಳೆಯೂ ಸಹ ಆಗುತ್ತಿಲ್ಲ. ಅದು ಎಲ್ಲರಿಗೂ ತಿಳಿದ ವಿಷಯವಾಗಿದೆ. 3—4 ವರ್ಷಕ್ಕೆ ಒಂದು ಸಲವಾದರೂ ಸರಿಯಾದ ಬೆಳೆ ರೈತನಿಗೆ ಸಿಕ್ಕುವುದಿಲ್ಲ. ಈ ರೀತಿ ರೈತನು ಎಷ್ಟೋ ಕಷ್ಟಪಟ್ಟುಕೊಂಡು ತಿನ್ನುವುದಕ್ಕೆ ತಿಂಡಿಯಿಲ್ಲದೆ ಹಾಹಾಕಾರ ಪಡುತ್ತಾ ಇರುವುದನ್ನು ಕಂಡು ಸಹ ಇದಕ್ಕಾಗಿ ಸ್ಪೆಷಲ್ ಆಗಿ ಒಂದು ಕೋಟಿ ರೂಪಾಯಿಗಳನ್ನಾದರೂ ಒದಗಿಸಿ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ರಚನಾತ್ಮಕವಾದ ಯಾವುದಾದರೂ ಕೆಲಸಗಳನ್ನು ಕೈಕೊಂಡರೆ ಆ ಡಿಸ್ಟ್ರಿಕ್ಟಿನ ಕ್ಷಾಮಬಾಧೆಯಿಂದ ಜನರು ಪಾರಾಗುತ್ತಾರೆ. ಆ ರೀತಿ ಮಾಡುವುದಕ್ಕೆ ಸ್ಪೆಷಲ್ ಆಗಿ ಹಣವನ್ನು ಒದಗಿಸಿಲ್ಲವಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ. ರಚನಾತ್ಮಕ ಕಾರ್ಯಗಳಿಗೆ ಅಂದರೆ, ಬಾವಿಗಳನ್ನು ತೋಡಿಸುವುದಕ್ಕೆ ಸಬ್‌ಸಿಡಿ ಎಂಬುದಾಗಿ 500 ರೂಪಾಯಿಗಳನ್ನು ಕೊಡುತ್ತಾ ಇದ್ದರು. ಕೆಲವು ಕಾಲದಲ್ಲಿ ಅದು ಸಾವಿರ ರೂಪಾಯಿಗಳಿಗೂ ಏರಿತ್ತು. ಏನು ದುರದೃಷ್ಟವೋ ಅದು ಪುನಃ 500 ರೂಪಾಯಿಗೆ ಇಳಿಸಲ್ಪಟ್ಟು ಈಚೆಗೆ ಅದಕ್ಕೆ 250 ರೂಪಾಯಿಗಳನ್ನು ಮಾತ್ರ ಕೊಡುತ್ತಾ ಇದ್ದಾರೆ. ಈ ವಿಷಯದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಡೆ ಪ್ರವಾಸ ಬಂದ ಕಾಲದಲ್ಲಿ ಪ್ರಸ್ತಾಪಮಾಡಲಾಗಿ, ಈ ಸಬ್‌ಸಿಡಿ ಜಾಸ್ತಿ ಮಾಡುವುದಕ್ಕಾಗುವುದಿಲ್ಲ, 500 ರೂಪಾಯಿಗಳನ್ನು ಕೊಟ್ಟರೂ ಸಾಕಾಗುವುದಿಲ್ಲ, ಕೊಟ್ಟರೆ, 2,000 ರೂಪಾಯಿ ಕೊಡಬೇಕೆಂದು ಅವರ ವಾಣಿಯಿಂದ ಹೇಳಿದರು. ಇದು ಬಹಳ ಸಂತೋಷದ ವಿಷಯ. ಆದರೆ ಅದನ್ನು ಕೊಡಲೇಬೇಕೆಂದು ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಬಾವಿ ಇಲ್ಲದೆ ರೈತರು ಜೀವಿಸುವುದಕ್ಕೆ ಸಾಧ್ಯವೇ ಇಲ್ಲ ಎಂಬುದನ್ನು ಎಲ್ಲರೂ ಅರಿತೇ ಇದ್ದಾರೆ. ಒಂದು ಬಾವಿ ತೆಗೆಸಬೇಕಾದರೆ 60-70 ಅಡಿಗಳ ಆಳದವರೆಗೂ ನೀರು ಬರುವುದಿಲ್ಲ. ಹತ್ತಾರು ಸಾವಿರ ರೂಪಾಯಿಗಳು ಬೇಕು. ಹತ್ತಾರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ರೈತರು ಬಾವಿ ತೋಡಿಸಿ ಬೆಳೆ ಬೆಳೆದು ಸಾಲ ತೀರಿಸಿಕೊಂಡು ಉದ್ಧಾರವಾಗಬೇಕಾಗಿದ್ದರೆ ಬಹಳ ಕಷ್ಟ. ಆದ್ದರಿಂದ ಈಗ ಕೊಟ್ಟಿರತಕ್ಕ ಸಬ್‌ಸಿಡಿಯಲ್ಲ ಸ್ವಲ್ಪಮಟ್ಟಿಗೆ ದುರುಪಯೋಗವಾಗಿರಬಹುದು. ಅವನಿಗಿರತಕ್ಕ ಅರ್ಧ ಎಕರೆ ಒಂದು ಎಕರೆ ಜಾಗದಲ್ಲಿ ಸರ್ಕಾರದವರು ಕೊಡುವ 500 ರೂಪಾಯಿ ಬಾವಿ ತೆಗೆಸಿದರೆ ಅದರಿಂದ ಬೆಳೆಯುವುದಾದರೂ ಏನು ? ಖಂಡಿತ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ಅವನು ಬೆಳೆಯುವುದು ಈರುಳ್ಳಿ, ಬೆಳ್ಳುಳ್ಳಿ. ಆದುದರಿಂದ ಸಾಮಾನ್ಯವಾಗಿ ಸಬ್‌ಸಿಡಿ ಕೊಡತಕ್ಕ ಬಾವಿಗಳ ವಿಷಯದಲ್ಲ, ಆ ಬಾವಿಯಿಂದ ಆಬಾದಾಗುವ ಜಮೀನು ಎರಡು ಎಕರೆಗಿಂತಲೂ ಕಡಮೆಯಿರಕೂಡದು ಮತ್ತು ಬಾವಿಯ ಪ್ರಮಾಣವೂ 5—6 ಸಾವಿರ ರೂಪಾಯಿಗಳಿಗೆ ಕಡಮೆಯಿಲ್ಲದ ಹಾಗೆ ನಿರ್ಮಾಣವಾದಂಥಾದ್ದಾಗಿರಬೇಕು, ಎಂದು ವಿಧಾಯಕ ಮಾಡಿ ಅಂಥ ಸಂದರ್ಭದಲ್ಲಿ ಸಬ್ಸಿಡಿಕೊಡುತ್ತೇವೆಂದು ಹೇಳಿ, ರೈತರಿಗೆ ಸಹಾಯಮಾಡದೆ ಇದ್ದರೆ, ನಮ್ಮ ಕೋಲಾರ ಡಿಸ್ಟ್ರಿಕ್ಟಿನ ಪ್ರಜೆಗಳಿಗೆ ಉಳಿಗಾಲವೇ ಇಲ್ಲ. ಚಿಂತಾಮಣಿ ತಾಲ್ಲೂಕಿನ ಎರಡು ಹೋಬಳಿಗಳಾದ ಚಿಲಕಲನೇರ್ಪು ಮುಂಗಾನ ಪಲ್ಲಿ ಇವುಗಳಲ್ಲಿ ಸುಮಾರು ಸಾವಿರಕ್ಕೆ ಮೇಲ್ಪಟ್ಟು ಬಾವಿಗಳಿವೆ. ಈ ಬಾವಿಗಳ ಆಶ್ರಯದಲ್ಲಿ ಸಾವಿರಾರು ಎಕರೆ ಬತ್ತವನ್ನೇ ಬೆಳೆಯುತ್ತಿದ್ದಾರೆ. ಈ ಬಾವಿಗಳಲ್ಲಿ ಐವತ್ತು ಅರವತ್ತು ಅಡಿಗಳ ಕೆಳಗಿನಿಂದ ಕಪಿಲೆಯಿಂದ ನೀರೆಳೆದು ಬೆಳೆ ತೆಗೆಯುತ್ತಾರೆ. ಒಂದು ಸಾವಿರ ರೂಪಾಯಿನ ಎತ್ತುಗಳನ್ನು ತೆಗೆದುಕೊಂಡರೆ ಅವು ಎರಡೇ ವರ್ಷಕ್ಕೆ ಹಾಳಾಗಿ ಹೋಗುತ್ತವೆ. ಆದ್ದರಿಂದ ಏನಾದರೂ ಮಾಡಿ ಸ್ಪೆಷಲ್ ಸಿಬ್ಬಂದಿಯನ್ನಾದರೂ ತೆಗೆದುಕೊಂಡು ನಮ್ಮ ತಾಲ್ಲೂಕಿನ ಎಲ್ಲಾ ಬಾವಿಗಳಿಗೂ ವಿದ್ಯುಚ್ಛಕ್ತಿ ಪಂಪುಗಳನ್ನು ಒದಗಿಸುವ ಸಲುವಾಗಿ ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಇನ್ನೊಂದು ಮುಖ್ಯ ವಿಚಾರವನ್ನು ಘನ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಭೂಕಂದಾಯ ಹಾಕಿರುವುದು ಬೇರೆ ಡಿಸ್ಟ್ರಿಕ್ಟುಗಳಲ್ಲಿರುವುದಕ್ಕಿಂತಲೂ ಜಾಸ್ತಿ. ಖುಷ್ಕಿ, ತರಿ ಯಾವುದಕ್ಕೂ ಒಂದಕ್ಕೆ ನಾಲ್ಕರಷ್ಟು ಕಂದಾಯ ವಿಧಿಸಿದ್ದೀರಿ. ಈ ಪ್ರಶ್ನೆ ಅನೇಕ ವರ್ಷಗಳಿಂದ ಸರ್ಕಾರದ ಮುಂದೆ ಬರುತ್ತಿದೆ. ಖುಷ್ಕಿ ಜಮೀನಿಗೆ ಎಕರೆ ಒಂದಕ್ಕೆ ಎರಡರಿಂದ ಮೂರು ರೂಪಾಯಿಗಳ ವರೆಗೂ ತರೀ ಜಮೀನಿಗೆ 10 ರೂಪಾಯಿಗಳ ವರೆಗೂ ಹಾಕಿದ್ದೀರಿ. ಇದಕ್ಕೆ ಕಾರಣವೇನೋ ಗೊತ್ತಿಲ್ಲ. ಮೈಸೂರು ಮುಂತಾದ ಡಿಸ್ಟ್ರಿಕ್ಟುಗಳಲ್ಲಿ ಬೆಳೆ ಚೆನ್ನಾಗಿ ಆಗುವ ಸ್ಥಳಗಳಲ್ಲಿ ಕಂದಾಯ ಬಹಳ ಕಡಮೆ ಹಾಕಿರುವುದನ್ನು ನೋಡಿದರೆ ಅದೇನು ನಮ್ಮ ದುರದೃಷ್ಟವೋ ಗೊತ್ತಿಲ್ಲ. ಹಿಂದಿನ ಸರ್ಕಾರದವರು

ಕೋಲಾರ ಜಿಲ್ಲೆಯ ಪ್ರಜೆಗಳನ್ನು ಸವತಿ ಮಕ್ಕಳಂತೆ ಕಾಣುತ್ತಿದ್ದರೆಂದು ಹೇಳಬೇಕು. ಈಗಿನ ಸರ್ಕಾರದವರಾದರೂ ಸವತಿ ಮಾತ್ಸರ್ಯವನ್ನು ಬಿಟ್ಟು ನಮ್ಮ ಡಿಸ್ಟ್ರಿಕ್ಟಿನ ಪ್ರಜೆಗಳ ಮೇಲೆ ಕರುಣೆಯಿಟ್ಟು ಈ ಕಷ್ಟ ನಿವಾರಣೆಗೆ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಷ್ಟು ಹೇಳಿ, ಈವತ್ತು ಮಾನ್ಯ ಮಂತ್ರಿಗಳು ನಮ್ಮ ಮುಂದಿಟ್ಟಿರತಕ್ಕ ಬಡ್ಜೆಟ್ಟನ್ನು ಸ್ವೀಕರಿಸುತ್ತಾ ನಮ್ಮ ಕೋಲಾರ ಜಿಲ್ಲೆಯ ವಿಷಯದಲ್ಲಿ ಹೆಚ್ಚಿಗೆ ಅಭಿಮಾನವನ್ನು ತೋರಿಸಿರೆಂದು ಪ್ರಾರ್ಥನೆಮಾಡಿಕೊಂಡು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

Sri B. T. KEMPA RAJ (Bangalore South--Scheduled Castes).--Mr. Speaker, Sir, it is no wonder that the budget introduced before this House has got a special feature of its own. It has got a special feature of its own because this House is consisting of Members mainly elected on adult franchise. Again, any statesman and a student of finance can really appreciate and admire at the very preparation of the budget now before us. There can be no sort of criticism that could be levelled if we thoroughly and exhaustively study this financial report by the Chief and Finance Minister. It covers almost all the activities like social development, medical, production and industries, etc. Though there was a great deficit when the previous budget was prepared, it has been made up as far as possible by very many ways of cutting down the extra expenditure in so many governmental departments, by retrenchment of some officials and officers and other government servants, thereby making up the deficit to only one crore and odd.

In this connection I want to say a word to some of the friends that criticised this policy. One Member of the Opposition went to the extent of saying that everything should be made equal in a revolutionary form. It is very difficult, in whatever manner we tackle the matters of administration in a realistic sense, to level up; this kind of revolution of bringing equality all on a sudden in a State is not practicable. Therefore, whatever we do we should do it on the basis of construction and on the policy of construction. It is the constructive side of the things that we have to look and adjust the finances and allot the demands. Therefore, it is necessary for us for a while to think of the budget estimate that is in our hands which provides for the five-year plan. Though these plans, for the time being, owing to financial stringency cannot be given effect to immediately, we are going to undertake those schemes and we are sure that we will solve and improve the destiny of every poor man of the country.

Again, there is the amount allotted to Education. Owing to the increase in education, it is necessary to increase the finance to educational purposes, because the student population is increasing by leaps and bounds. How are we to face this increase of student population? Should we not provide for them? Is it not for the good of the youngsters of the coming generation that we will have to increase the funds for expenditure on education?

Again, coming to the side of medicine, there also we have to increase the expenditure owing to the prevailing conditions. The hospitals are becoming primary institutions because of the increase of patients.

Again, coming to the irrigation side of the subject, as one of our friends in the Opposition, who himself belongs to no political party and himself is a political entity, also said, the previous Government should have invested as much funds on irrigational schemes as they invested on industrial undertakings. Under no administrative policy can the entire amount be invested on one item of work. It is essential that the Government should so distribute the funds at its disposal as to ensure maximum yield and return in almost all the primary activities of the State. Industry, irrigation, agriculture, medicine, forest, revenue and everything which comprise the State activities including justice administration, protection, etc. everything has to be met by this revenue at our disposal. Coming to the next point we can say that there are so many claims for development and thay are supposed to be given effect to immediately provided the Central Government will come to our rescue

(SRI B. T. KEMPA RAJ.)

and it is high time that the Central Government came to our rescue in this connection. As the Chief Minister has already stated in his speech, the Government is doing its best to insist upon the Central Government to help as far as possible to build up national activities.

Coming to irrigation, I think I should quote one or two instances. In order to improve the food policy of the State, it is contemplated, and work also has been undertaken, to construct 3 big reservoirs which within a course of five years will be able to irrigate about one lakh and odd acres of land. When these projects are completed there is no worry for the people of the State in regard to unexpected and unanticipated famine.

Then coming to the food policy directly, it is not for the first time it is being said that the Mysore Government is the pioneer in taking a bold step to revise the food policy adopted by the Central Government. It is a bold step that the Government, a Government which is duly established after the election with adult franchise, has taken to remove the control that was prevalent in the rural areas. Therefore, whichever State it may be which has removed the food control, it can be said that it has taken lessons from the State of Mysore.

Coming to the industrial side, the Government is encouraging Khadi industry, cottage industry and other handloom industry. (Laughter). Therefore. this Budget, which has been presented to this House by the Chief Minister, can in no way be criticised or in no way it can be improved upon. One of my Hon'ble friends went to the extent of saying that no provision has been made for housing labour and poorer classes. A thorough reader of the Finance Minister's speech, can very well understand and can say that adequate provision has been made to that end also.

Sri M. SHANKARLINGE GOWDA.—Who is a thorough reader ?

Sri B. T. KEMPA RAJ.—Coming to the labour side, it has been contemplated that two industrial tribunals may be constituted in order to settle the labour conflicts as early as possible, thereby bringing about harmony by compromise between employers and employees. Therefore, while drawing the attention of every Hon'ble Member of this House, I am saying that this Budget requires to these facts no criticism. It invites no criticism. It is for the first time that we are seeing that a very efficient budget has been prepared, for the first time in the history of the Mysore State. That credit goes to the present Ministry. Therefore it is necessary for us to welcome this budget. Thank you.

Mr. SPEAKER.—The House will now adjourn and meet tomorrow at 12.

The Assembly adjourned at Five of the Clock to meet again at Twelve of the Clock next day, Friday, 27th June 1952.